# ಕೊರವಂಜಿ

## ತಿಳಿನಗೆಯ ಕಾರಂಜಿ



**ಯುಗಾದಿ ವಿಶೇಷಾಂಕ**

ಸಂಪುಟ–೨

ಸಂಚಿಕೆ– ೭

ಏಪ್ರಿಲ್ ೮೫

ಬಿಡಿಪ್ರತಿ :


ಕೇವಲ ಒಂದೂವರೆ ರುಪಾಯಿ

ಈ ಸಂಚಿಕೆಯಲ್ಲಿ........



ವ್ಯಂಗ್ಯ ಚಿತ್ರಗಳು — ಸೂರಿ ಮತ್ತು ಅಶ್ವಥ್

ಮುದ್ರಣ: ಇಂಪ್ರೆಷನ್ಸ್, ಮಲ್ಲೇಶ್ವರಂ. ದೂರವಾಣಿ : 32989, 33444




ಸಂಪುಟ—೨ ಕ್ರೋಧನ ಯುಗಾದಿ ಸಂಚಿಕೆ—೭

ಏಪ್ರಿಲ್ ೮೫

ಮುಂದೆ ಇರುವ ಇದು ಅಮೃತವಾದ ಬ್ರಹ್ಮವೇ, ಹಿಂದೆ ಬ್ರಹ್ಮವೇ, ದಕ್ಷಿಣಕ್ಕೂ ಬ್ರಹ್ಮವೇ, ಉತ್ತರಕ್ಕೂ ಬ್ರಹ್ಮವೇ.

—ಮುಂಡಕ

ಕ್ರೋಧನ ಸಂವತ್ಸರಕ್ಕೆ ನಾವೀಗ ಕಾಲಿಟ್ಟಿದ್ದೇವೆ. ನಮ್ಮ ಬಳಗದವರೆಲ್ಲರಿಗೆ, ಲೋಕಕ್ಕೆ ಸುಖ ಸಂತೋಷಗಳುಂಟಾಗಲಿ ಎಂದು ಹಾರೈಸುತ್ತೇವೆ.

ಹಿಂದೆ ಅಣು ಭೀತಿ, ಮುಂದೆ ಪರಿಸರ ಮಾಲಿನ್ಯ, ಎಡಕ್ಕೂ ಬಲಕ್ಕೂ ತುಂಬಿರುವುವೆಂದು ಅಳುತ್ತಾ ಕೂತರೆ ಬಂದ ಲಾಭವೇನು. ಅರ್ಥ ಪ್ರಾಧಾನ್ಯ ವ್ಯವಸ್ಥೆಯಲ್ಲಿ. ಜೀವನ ಮೌಲ್ಯಗಳಿಗೆ ಮನ್ನಣೆ ದೊರೆಯುತ್ತವೆಂದು ಭಾವಿಸುವುದು ದುಬ್ಬತನವಲ್ಲವೇ ? ಸುತ್ತಲೂ ಏನೇನು ನಡೆಯುತ್ತಿದೆಯೆಂದು ಅರಿತರೆ ವಿಷಾದವೇ ಫಲವಾಗಿ ದೊರೆತೀತು.

ಸದ್ಯ ಇವರಾರೂ ಸೃಷ್ಟಿಕರ್ತರಲ್ಲ. ಇದನ್ನು ಉಳಿಯಗೊಡಬೇಕೆಂಬ ಆಶೆಯೂ ಇವರಿಗಿಲ್ಲ. ಆದರೆ ಬೇರೆಯುವರೂ ಇದ್ದಾರೆ. ಭಂಗವನ್ನುಂಡೂ ನಗ ಬಲ್ಲವರೂ–ಇದ್ದಾರೆ. ಸೋಲನ್ನರಿಯದ ಪ್ರವೃತ್ತಿ ಸಜ್ಜನರಿಗೆ ಬರಲಿ ಎಂದು ಅಪರಂಜಿ ನಗು ಹರಕೆಯನ್ನು ಹಾಕುತ್ತಾಳೆ.

# ಅಪರಂಜಿ ಕಿಡಿ

---

ಕಪ್ಪು ಹಣದ ಪಿಡುಗು ನಿರ್ಮೂಲನಾ ಕಾರ್ಯಕ್ರಮ

—ರಾಜೀವ್ ಭರವಸೆ

ಕಾಳೀದಾಸನ ಜ್ಞಾಪಕ ಬರುತ್ತಲ್ಲ !

*　*　*　*　*

ಚಿನ್ನದ ನಿಕ್ಷೇಪಗಳನ್ನು ಹುಡುಕಲು ಹೊಸ ವಿಧಾನಗಳು ಅಗತ್ಯ

—ವಿಜ್ಞಾನಿಗಳ ಹೇಳಿಕೆ

ಬೊಂಬಾಯಿ ಬಳಿ ಸಮುದ್ರ ತಳದಲ್ಲಿ ಹುಡುಕಿ ನೋಡಲಿ !

*　*　*　*　*

ಚುನಾವಣಾ ಗಲಭೆ; ಜೀಪಿಗೆ ಬೆಂಕಿ

—ಸುದ್ದಿ

ಜಗಳೂರಿನಲ್ಲಿ ಗಲಭೆಯಾದದ್ದು ಆಶ್ಚರ್ಯವೇನಲ್ಲ !

*　*　*　*　*

ಒಬ್ಬ ಮಾಜೀ ಮುಖ್ಯಮಂತ್ರಿಯಾಗಿ ಸಮಾಜದಲ್ಲಿ ನನಗಿರುವ ಸ್ಥಾನವನ್ನು ಯಾರೂ ಕಸಿದುಕೊಳ್ಳಲು ಸಾಧ್ಯವಿಲ್ಲ

—ಶ್ರೀ ಗುಂಡುರಾವ್

ಕಠೋರ ಸತ್ಯ ಅಂದರೆ, ಇದು !

*　*　*　*　*

ಸುಳ್ಳು ಅಂಕಪಟ್ಟಿಯ ಸಹಾಯದಿಂದ ವೈದ್ಯಕೀಯ ಕಾಲೇಜು ಸೇರಿದ ವಿದ್ಯಾರ್ಥಿನಿಗೆ ಜೈಲು ವಾಸದ ಶಿಕ್ಷೆ

—ಸುದ್ದಿ

ನ್ಯಾಯಾಲಯ ಅವರಿಗೇ ಕಹಿ ಔಷಧಿ ಕುಡಿಸಿದಂತಾಯಿತು !

* * * * *

ಇನ್ನು ಮುಂದೆ ಚುನಾವಣಾ ದಿನಗಳನ್ನು ಕ್ರಿಕೆಟ್ ಮ್ಯಾಚ್ ಕಾರ್ಯಕ್ರಮಗಳಿಗೆ ಅನುಗುಣವಾಗಿ ನಿರ್ಧರಿಸುತ್ತಾರಂತೆ !

* * * * *

ರಾಜ್ಯಾಂಗ ತಿದ್ದುಪಡಿಯಿಂದ ಜಿಯಾಗೆ ಮತ್ತಷ್ಟು ಅಧಿಕಾರ

—ಪಾಕ್ ಕಾನೂನು ತಜ್ಞರು

ಅಲ್ಲಿ ಕಾನೂನು ತಜ್ಞರಿಗೇನು ಕೆಲಸ ?

* * * * *

ಕಾಂಗ್ರೆ ಕಾರುಗಳನ್ನು ಈಗ ಅಪಜಯವಾಹಿನಿಗಳೆಂದು ಕರೆಯಬಹುದು !

* * * * *

'ಆಡಿ'ಗೋಸ್ಕರ ರವಿಶಾಸ್ತ್ರಿ ಚೆನ್ನಾಗಿ ಆಡಿದರು ಎನ್ನುವುದು ಶುದ್ಧ ಕುಹಕ

# ಹಾಸ್ಯಮೇಳ

ಟಿ. ಸುನಂದಮ್ಮ

---

ನಮ್ಮಜ್ಜಿಯ ಕಾಲದಲ್ಲಿ ಕಾಶೀಯಾತ್ರೆ ಮಾಡಿ ಬಂದವರ ದರ್ಶನಕ್ಕೆ ಮಂದಿ ಹೋಗುತ್ತಿದ್ದರಂತೆ· ಅವರ ಕಾಲು ಮುಟ್ಟಿ ನಮಸ್ಕಾರ ಮಾಡಿದಾಗ ಕಾಶೀ ಯಾತ್ರೆಯ ಪುಣ್ಯದ 'ಮಿಲಿ' ಪರ್ಸೆಂಟ್ ಇವರಿಗೂ ವರ್ಗ ಆಗುತ್ತಿತ್ತಂತೆ. ವಿಶ್ವ ಹಾಸ್ಯ ಸಮ್ಮೇಳನದಲ್ಲಿ ಭಾಗವಹಿಸಿ ಹಿಂದಿರುಗಿದ್ದ ಮೈಲಾರಯ್ಯ ದಂಪತಿಗಳ ದರ್ಶನಕ್ಕೆ ನಾನು ಹೋದದ್ದು ಅದೇ ಉದ್ದೇಶದಿಂದಲೇ.

ಸಮ್ಮೇಳನದ Motto ನೋಡಿದ್ದೆ ಮನುಷ್ಯನ ಮಾಮೂಲು ಗೋಳುಕರೆ ಮುಖ; ಮುಖವಾಡವನ್ನು ತೆಗೆದಿರಿಸಿದರೆ ಅದೇ ಮುಖ—ನಗುತ್ತ! ಸೋಫಾ ದಲ್ಲಿ ಮುದುಡಿ ಕೂತ ಮೈಲಾರಯ್ಯನನ್ನು ನೋಡಿದಾಗ, ನಗುಮುಖ ಹಾಗಿರಲಿ, ವಿಶ್ವ ಹಾಸ್ಯ ಸಮ್ಮೇಳನದ ಬದಲಿಗೆ ವಿಶ್ವ ಶೋಕ ಸಮ್ಮೇಳನದಲ್ಲಿ ಭಾಗವಹಿಸಿ ಬಂದನೋ ಎನ್ನಿಸಿತು. ಬೆಳಗಾದರೆ ಬರಲಿರುವ ಹೋಳಿಯ ಘೋಷಣೆಗೆ (ಲಬೋ ಲಬೋ !) ಸಿದ್ಧನಾಗಿದ್ದಂತೆ ಕಂಡ.

"ಏನು ಸಮಾಚಾರ ಮೈಲಾರಯ್ಯನವರೇ ?

ಎನ್ನುವಷ್ಟರಲ್ಲಿ ನರಸಮ್ಮ ಸೀರೆಗೆ ಕೈವರೆಸುತ್ತ ಹೊರಗೆ ಬಂದಳು. ಮೈಲಾ ರಯ್ಯ ಮಾತಾಡಲೇ ಇಲ್ಲ ಬದಲಿಗೆ ಕೈ ಬಾಯಿ ಹೊಟ್ಟೆ ಉಸಿರು—ಏನೇನೋ ಸನ್ನೆ ಮಾಡಿದ. ಈತನಿಗೆ ಮಾತು ಹೋಗಿ ಎಷ್ಟು ದಿನ ಆಯಿತು ? ಎಂ.ಜಿ.ಆರ್, ಸಿಂಪತಿ ವ್ರತ ಎಂದಿನಿಂದ ?" ಎಂದು ನಾನಂದುಕೊಳ್ಳುತ್ತಿರುವಾಗ ಸರಸಮ್ಮ ವಿವರಿಸಿದಳು—

"ನೋಡಿ; ಹೈದರಾಬಾದಿಗೆ ಹೋಗಿ ಬಂದಾಗಿನಿಂದ ಈ ಭಾಷೆ! ರವೀಂದ್ರ ಭಾರತಿ ವೇದಿಕೆ ಮೇಲೆ ಆ ನಿರಂಜನದಾಸ್ 'ಮೈಮ್' ಮಾಡಿದ. ದಂತವೈದ್ಯ ನಾಗಿ ಕಾಣದ ಸಾಬೂನಿನಲ್ಲಿ ಕೈ ತೊಳೆದು ಇಲ್ಲದ ಇಕ್ಕಳದಲ್ಲಿ ಹಲ್ಲು ಕಿತ್ತು ಗಾಳಿ ಯಲ್ಲಿ ನೋಟು ಎಣಿಸಿ ಕಿಸೆ ತುಂಬಿಕೊಂಡ. ಹೆಣ್ಣಾಗಿ, ಇಲ್ಲದ ಕೂದಲು ಬಾಚಿ ಕಾಣದ ಕುಂಕುಮ ಹಚ್ಚಿ ನೋಡದ ಪವುಡರ್, ಲಿಪ್‌ಸ್ಟಿಕ್ ಬಳಿದುಕೊಂಡು ಪೆದ್ದ

ರಾಜನಂತೆ ಬರಿಗೈಯಲ್ಲೇ ಸೀರೆ ಉಟ್ಟು ಸೆರಗು ಜೋಡಿಸಿ ಖಾಲಿ ನೆಲದಲ್ಲಿ ಹೈ-ಹೀಲ್ಡ್ ಷೂ ಮೆಟ್ಟಿ ಮುಂಗಾಲಲ್ಲಿ ನಡೆದು ಹೋದ! ........ ಇವರಿಗೀಗ ಅದೇ ಕಾಯಿಲೆ ಒಡಿದಿದೆ!"

"ಹಾಗೇನು? ಈತ....ಸನ್ನೆ ಮಾಡಿ ಹೇಳಿದ್ದೇನು?"

"ಹಿ ಹಿ ಹಿ .... ಹಿ ಹಿ ಹಿ ಹಿ .... ಹೊಟ್ಟೆ ಸರಿಯಾಗಿಲ್ಲ ಅಂತ. ಹಾಸ್ಯ ಸಮ್ಮೇಳನದಲ್ಲಿ ತುಂಬಾ ಹಾಸ್ಯ ಸಿಕ್ತಿದ್ದದ್ದು ಅಂದರೆ, ಊಟದ ವೇಳೇಲಿ! ಹೊತ್ತಿಗೊಂದು 'ಪಾಷ್' ಕ್ಲಬ್ಬಿನಲ್ಲೋ ಭಾರೀ ಹೋಟೆಲಿನಲ್ಲೋ ಸೈಘಾಮರ ಮಿನಿ ಅರಮನೆ ಜೂಬಿಲಿ ಹಾಲ್‌ನಲ್ಲೋ ಆತಿಥ್ಯ. ಟೇಬಲ್ ತುಂಬ ಬಗೆ ಬಗೆಯ (ಹೆಸರು ಗೊತ್ತಿರದ) ಖಾದ್ಯಗಳು. ಪಾತ್ರೆ ಖಾಲಿಯಾಗಿ ಬಿಟ್ಟು ತಮಗೆಲ್ಲಿ ಸಿಗುವುದಿಲ್ಲವೋ ಎಂದು ಅತಿಥಿಗಳು ಟೇಬಲ್‌ಗೆ ಓಡುವುದು, ರಿಕಾರ್ಡ್. ಟೈಂನಲ್ಲಿ ಬಡಿಸಿಕೊಳ್ಳುವುದು. ಸೂಪರ್ ರಿಕಾರ್ಡ್ ಟೈಂನಲ್ಲಿ ತಿಂದು ಮುಗಿಸಿ ಮಗ್ಗುಲ ಟೇಬಲ್‌ಗೆ ಫ್ರೂಟ್‌ಸಲಡ್‌ಗೋ ಐಸ್ ಕ್ರೀಮಿಗೋ ಮೊಗಲಾಯ್ ಸ್ವೀಟಿಗೊ—ಓಡುವುದು! ........ಹಿ ಹಿ ಹಿ .... ಓಡೋ ಸ್ಪರ್ಧೇಲಿ ಇವರು ಮೊದಲಿಗರಾದದ್ದೇ ಈ ದುರಂತ ಮುಖವಾಡಕ್ಕೆ ಕಾರಣ!"

"ಅಂದರೆ....

"ಓವರ್ ಟೈಂ ಕೆಲ್ಸ ಮಾಡಿದ ಜೀರ್ಣಾಂಗಗಳು ವಿಶ್ರಾಂತಿ ತೆಗೆದುಕ್ಕೊಂಡು ಬಿಟ್ಟಿವೆ!"

"ಲಂಘಣ ಹಾಕಿಬಿಟ್ಟಿದಾಳೆ"—ಮೈಲಾರಯ್ಯ ಬಾಯಿ ತೆರೆದ.

"ಪಾಪ ಪಾಪ!........ಆಯಿತು. ಸಮ್ಮೇಳನದ ಬಗ್ಗೆ ಏನೂ ಹೇಳಲಿಲ್ವಲ್ಲ?"

"ಹಾಸ್ಯ ........ ರೈಲ್ವೇ ಸ್ಟೇಷನ್‌ನಲ್ಲೇ ಸಿಕ್ಕಿತು ........ ಹಿ ಹಿ ಹಿ........ ಇವಳು........ ಕಿಸಿ ಕಿಸಿ ನಗತೊಡಗಿದ. ಗಂಡನನ್ನು ದುರುಗುಟ್ಟಿ ಸರಸು ನೋಡಿದಾಗ, ಮೈಲಾರಯ್ಯ ಮುಂದುವರೆಸಿದ—

"ಸ್ಟೇಷನ್ ಆಚೆ ಬರೋ ಹೊತ್ತಿಗೆ, ಬ್ಯಾಂಡು ಬಜಂತ್ರಿ ಬಣ್ಣಬಣ್ಣದುಡಿಗೆ; ಸಾಲು ಸಾಲು ಕಾರುಗಳು ಪೋರ್ಟಿಕೊದಲ್ಲಿ ನಿಂತು ಬಿಟ್ಟಿವೆ! ನಮ್ಮನ್ನು ಇದಿರುಗೊಳ್ಳಲು ಏನೆಲ್ಲ ಏರ್ಪಾಟು ಅಂತ ಆನಂದದಿಂದ ಮುಂದೆ ಬಂದೆವು. ಇವಳು ಅದರಲ್ಲಿ ಮೊದಲಿಗಳಾಗಿ........ಹಿ ಹಿ ಹಿ........ಮುನ್ನುಗ್ಗಿದಾಗ 'ಪೀಛೇ ಹಠೋ

(ಹಿಂದಕ್ಕೆ ಸರಿ !)' ಗದರಿದ, ಘೂರ್ಕ !....ಅದು. ಅದೇ ರೈಲಿನಲ್ಲಿ ಬಂದ ಮದುವೆ ಗಂಡನ್ನೆದುರುಗೊಳ್ಳಲು ಬಂದ 'ಬಾರಾತ್'' ಪಾರ್ಟಿ ಅನ್ನೋದು ಆಗ ಗೊತ್ತಾಯ್ತು!"

ಈ ದಂಪತಿಗಳು ಮುಖ್ಯವಾದ ವಿಚಾರಕ್ಕೇ ಬಾರರಲ್ಲ? ಭಾಷಣಕಾರನ ಪೀಠಿಕಾ ಪ್ರಕರಣದ ಹಾಗೆ, ಗಡ್ಡಕ್ಕಿಂತ ಸೋಪಿನ ನೊರೆಯೇ ಹೆಚ್ಚಾದ ಹಾಗೆ....?

"ಆಯ್ತು, ಸಮ್ಮೇಳನ ಹೇಗೆ ನಡೀತು? ವಿದೇಶೀಯರಲ್ಲದೆ ನೀವೂ ಎಲ್ಲಾ ಭಾಷೆಯೋರು ಸೇರಿದ್ರಲ್ಲ? ಭಾಷೈಕ್ಯತೇ ಹಾಸ್ಯ ಭಾವ ...?

"ಅಭಾಷೈಕ್ಯತೆ ಕಾರ್ಯಕ್ರಮಗಳು ನಡೆದುವು: ಅವರವರ ಭಾಷೆಯೋರು ಅವರವರ ಮಂದೀ ಮುಂದೆ ನಾಟಕ–ಕವನ–ನಕಲಿ–ಚುಟುಕಲೀ ಪ್ರದರ್ಶನ ಮಾಡಿ ನಗಿಸಿದೆವು.

"ಒಟ್ಟಾರೆ ಕಲೆತು, ಮಾತಾಡಿ....?"

"ಹಾಂ! ಹಾಸ್ಯದ ಬಗ್ಗೆ ವಿಚಾರ ಸಂಕೀರಣ ನಡೀತು; ಮನಃಶಾಸ್ತ್ರಜ್ಞ, ಶಿಶು ತಜ್ಞ, ಶಿಕ್ಷಣ ತಜ್ಞ, ಎಲ್ಲಾ ತಜ್ಞರೂ ಉದ್ದುದ್ದ ಲೇಖನ ಓದಿದರು—ಸೀರಿಯಸ್ಸಾಗಿ! ........ಹಿ ಹಿ ಹಿ ಹಿ........!"

"ಸೀರಿಯಸ್ಸಾಗಿ ಅಂತೀರಿ ಸರಸಮ್ಮ? ನಗ್ತಿದೀರಿ?"

"ಜೂಬಿಲಿ ಹಾಲಿನ ಮೆತ್ತನ್ನ ಆಸನದಲ್ಲಿ ಇವರು ಗೊರಕೆ ತೆಗೆದಾಗ, ಎಲ್ಲರೂ ಇವರ ಕಡೆ ತಿರುಗಿದಾಗ......ಹಿ ಹಿ ಹಿ ಹಿ.........!

ಮೈಲಾರಯ್ಯನಿಗೆ ಕೋಪ ಬಂತು.

"ಯಾಕೆ? Jokes of the World programme ಚೆನ್ನಾಗಿರಲಿಲ್ವಾ? ಎಲ್ರೂ ಬೇಕಾದ ಹಾಗೆ ನಗಲಿಲ್ವಾ? ತಬಸ್ಸುಮ್ ಮಾತು ಖುಷಿ ತರಲಿಲ್ವಾ?

"ಹುಂ....ನಕ್ಕೆವು; ಎಷ್ಟೋ ಜೋಕುಗಳು ಹಳಸಲೇ ಆದರೂ, ನಕ್ಕೆವು!.... ಅಂದ ಹಾಗೇ, ಆ ನವಾಬರ ಮನೇಗೆ ಊಟಕ್ಕೆ ಕರೆದಿದ್ರಲ್ಲ ಪ್ರತಿನಿಧಿಗಳ್ನ—ಅಲ್ಲಿ ಆದದ್ದು...? ಹಿ ಹಿ ಹಿ ಹಿ....

ಇವರು ಸಮ್ಮೇಳನದ ಕಾರ್ಯಕ್ರಮಗಳಿಗಿಂತ ಊಟ ತಿಂಡಿಯಲ್ಲೇ ಹೆಚ್ಚು ಹಾಸ್ಯ ಕಂಡದ್ದು ತಿಳಿದು ಕುಂಟು ನೆವ ಹೇಳಿ ಅಲ್ಲಿಂದ ಕಾಲ್ಕಿತ್ತೆ.

# Serve-ಅಜ್ಜನ ವಚನಗಳು

—ಎಸ್. ಆರ್. ರಮೇಶ್

---

ಗಂಡ ಹೆಂಡಿರ ಜಗಳ ಉಂಡುಮಲಗುವತನಕ
ಪುಂಡರಾ ಹಾವಳಿಯು ಎಲ್ಲೆಲ್ಲು ಜನತೆಕಾಲ್
ಚೆಂಡಾಯ್ತು ಕಾಣೊ — Serve-ಅಜ್ಜ—೧


ಉತ್ತವಗೆ ಭೂಮಿ ತಾ ಬಿತ್ತಿದವನದೆ ಬೆಳೆಯು
ತೊತ್ತೆ ಬಾ ಎಂದವನೆ ಯಜಮಾನ, ಹಣಗಿಣವು
ಇತವನದಲ್ಲ — Serve-ಅಜ್ಜ—೨

ಅರಿವಿಲ್ಲದಾ ಜನತೆ ಗುರಿಯಿಲ್ಲದಾಡಳಿತ
ಗರಬಡಿದ ದೇಶ ದಿಗ್ಭ್ರಮೆ ಗೊಂಡು ಮುಂದಕೆ
ಇರದೋಡದೇಕೆ — Serve-ಅಜ್ಜ—೩

ಬೀದಿಬೀದಿಗೆ ಶಾಲೆ ಕೊಂಪೆಯಲಿ ಕಾಲೇಜು
ಹಾದಿ ಬದಿಯಲಿ ಡಿಗ್ರಿಗಳ ಮಾಲೆ ಹಾರಾಜು
ಜಾದು ಅಲ್ಲವೆ ಹೇಳೊ — Serve-ಅಜ್ಜ—೪

ಹಾಗಿರುವೆ ಹೀಗಿರುವೆ ಹೇಗಿರುವ ಎನಬೇಡ
ಹ್ಯಾಗೊ ರೊಕ್ಕವಗಳಿಸು ಭಂಡ ನೆಂದರೆ ಏನು
ಭೋಗ ಜೀವನ ಮುಖ್ಯ — Serve-ಅಜ್ಜ—೫

ದೇಶ ದೇಶದಿ ದಂಡು ಕಂಡ ಕಂಡೆಡೆ ಗುಂಡು
ಭಾಷಣದ ತುಂಬ ತುಂಬಿದೆ ಶಾಂತಿ ಗಾಂಧೀಜಿ
ಹೇಸಿ ತಲೆ ಬಾಗಿಸಿದ — Serve-ಅಜ್ಜ—೬



11

# ದೂರವಾಣಿ ಕಿರಿಕಿರಿ

—ಇ. ಡಿ. ನರಹರಿ




ಬೆಂಗಳೂರಿನ ಮಧ್ಯದಲ್ಲಿ
ಕಾಂಗ್ರೆಸ್ ಗ್ರಾಸಿನ ತೋಟದಲ್ಲಿ
ಕಂಗೊಳಿಸುವ ದಿವ್ಯಸೌಧ
ಗೌರ್ನಮೆಂಟಿನ ಕಾರ್ಯಸೌಧ ॥೧॥

ಅಲ್ಲಿನಾ ಆಫೀಸಿನಲ್ಲಿ
ಬಂದ ಮುಗ್ಧರ ಹಿರಿದುತಿನ್ನುತ
ಮುನಿಸಿನಿಂದಲೆ ಕೆಲಸ ಮೊಳ್ಪನು
ನರಸೀಪುರದ ಬಸವಗೌಡನಂ ॥೨॥

ಒಂದು ದಿನ ಮಧ್ಯಾಹ್ನದಲ್ಲಿ
ಲಂಚಿನವರಿನ ಬಿಡುವಿನಲ್ಲಿ
ಗೊರಕ ಹೊಡೆಯುತ ನಿದ್ರಿಸಿದ್ದನು
ಮೇಲೆ ತಿಳಿಸಿದ ಗೌಡನು ॥೩॥

ದೂರವಾಣಿಯ ಘಂಟೆ ಮೊಳಗಿರೆ
ಪಿಳ್ಳೆಯೊಂದೂ ಅಲ್ಲಿ ಇಲ್ಲದಿರೆ
ಕೋಪದಿಂದಲಿ ಕನಲಿ ಎದ್ದನು
ನಿದ್ದೆಯಿಂದಲಿ ಬಸವನು ॥೪॥

"ಯಾವ ತಾಯಿಯ ಮಗನೋ ನೀನು
ದೂರವಾಣಿಯ ಕರೆಯುಮಾಡಲು
ಹೊತ್ತು ಗೊತ್ತು ಇಲ್ಲವೇ ? ಸಾಹೇಬ
ರಿಲ್ಲಿಲ್ಲ ಈಗ ಇಟ್ಟುಬಿಡು ನೀ ಫೋನನು !" ॥೫॥

ಕೋಪದಿಂದಲಿ, ತಾಪದಿಂದಲಿ
ಬಸದ ಗೌಡನು ರೇಗಿ ಕೂಗಲು
ಅತ್ತಣಿಂದಲಿ ಬಂತು ನೋಡಿ
ದೂರವಾಣಿಯ ಉತ್ತರ ! ॥೬॥

"ಯಾರೋ ಅಲ್ಲಿ ಇಡಿಯಟ್
ನಿನ್ನ ನೀಗಲೆ ಡಿಸ್ಮಿಸಿಸುವೆ
ತಿಳಿಯೆಯೇನು ನಾನು ಯಾರು ?
ನಿನ್ನ ಧಣಿಗಳ ಸಾಹೇಬ !" ॥೭॥

ದೂರವಾಣಿಯ ವಾಣಿಕೇಳಿ
ಭೂಮಿಗಿಳಿದನು ಗೌಡನು
ಆದರೇನು ನರಸೀಪುರದ
ನೀರ ಕುಡಿದವನಲ್ಲವೇ ? ॥೮॥

"ಫೋನಿನಾಚೆಯ ಧಣಿಗಳೇ
ತಿಳಿದಿಹಿರಾ ನಾ ನಾರೆಂದು ?"
"ಯಾರು ನೀನು ? ಬೊಗಳು ಈಗಲೇ
ಮನೆಗೆ ಕಳಿಸುವ ನಿನ್ನನು" ॥೯॥

"ಸಧ್ಯ ಬದುಕಿದೆ ! ನಾನು ಧನ್ಯ"
ಬಲದ ಮಗ್ಗುಲಲೆದ್ದೆ ನೀಗ
ಎಂದು ಹೇಳುತ ನಮ್ಮ ಬಸವನು
ಕೆಳಗೆ ಇಟ್ಟನು ಫೋನನು ॥೧೦॥

# ಯೋಗಾಭಾಸ

—ಶೀನೂ

ಪಾಠಕ ಮಹಾಶಯರೇ, ತಾವು ಈ ಲೇಖನದ ತಲೆಬರಹವನ್ನು 'ಯೋಗಾಭಾಸ' ವೆಂದು ಸರಿಯಾಗಿಯೇ ಓದಿದ್ದೀರಿ. ಅದು 'ಯೋಗಾಭ್ಯಾಸ' ಎಂಬುದರ ಕುಮಾರೀ ಮುದ್ರಣ (Miss Print) ಅಲ್ಲ.

(ಭಾಷಾ ಶಾಸ್ತ್ರದಲ್ಲಿ 'ವ್ಯುತ್ಪತ್ತಿ' ಜ್ಞಾನವುಳ್ಳ ಮಹನೀಯರು ಕುಮಾರೀ ಮುದ್ರಣವನ್ನು ಕು–ಮಾರೀ ಎಂದರೆ ಕೆಟ್ಟಮುಖದ ಮುದ್ರಣವೆಂದೂ ಅರ್ಥೈಸಬಹುದು. ಸಾಕು. ಸಾಕು. ಒಂದು ಸಣ್ಣ ಲೇಖನದಲ್ಲಿ ಇಷ್ಟೆಲ್ಲ ಕಠಿಣ ಶಬ್ದಗಳನ್ನು ಬಳಸಿದರೆ ಯಾವುದೇ ಮುದ್ರಕನೂ ಕುಮಾರಿಯ ಹಿಂದೆಯೇ ಹೋಗಬಹುದು). ಇರಲಿ.

* *

ನನ್ನ ಯೋಗಭ್ಯಾಸವು ಹೇಗೆ ಆಭಾಸದಲ್ಲಿ ಪರ್ಯವಸಾನವಾಯಿತೆಂದು ಹೇಳುವುದೇ ಈ ಬರಹದ ಉದ್ದೇಶ.

ನಲವತ್ತರ ನಂತರ ಸ್ವಲ್ಪ ಬೊಜ್ಜು ಬರುವುದು ಸ್ವಾಭಾವಿಕವೆಂದು ನನಗೂ ಗುಂಡಮ್ಮನಿಗೂ ಒಮ್ಮತವಿದ್ದರೂ, 'ಸ್ವಲ್ಪ' ವೆಂದರೆ ಎಷ್ಟೆಂಬುದರ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯವಿತ್ತು. ಚಿಕ್ಕಂದಿನಿಂದ ನಾನು 'ಡಬ್ಬೂ ಶೀನೂ' ಅಥವಾ 'ಹೊಟ್ಟೆಶೀನೂ' ಎಂದೇ ಪ್ರಸಿದ್ಧನಾಗಿದ್ದೆ. ಶಾಲೆಯಲ್ಲಿ ನಮ್ಮ ಸಹಪಾಠಿ ಇನ್ನೊಬ್ಬ ಶೀನೂ ಇದ್ದ ಅವನು ನರಪೇತಲ. ನಮ್ಮ ಮೇಷ್ಟ್ರು ನಮಗಿಬ್ಬರಿಗೂ 'ಲಾರೆಲ್ ಶೀನೂ' ಹಾಗೂ 'ಬ್ಯಾರೆಲ್ ಶೀನೂ' ಎಂದು ನಾಮಕರಣ ಮಾಡಿದ್ದರು. ಚಿಕ್ಕಂದಿನಲ್ಲಿಯೇ ನಾನು ಹಾಗಿದ್ದಮೇಲೆ ನಲವತ್ತರ ನಂತರ ಹೇಗಿದ್ದೇನೆಂದು ನೀವೇ ಊಹಿಸಬಹುದು.

ಕೆಲವರು ನನ್ನನ್ನು ಕರ್ನಾಟಕದ 'ಪಿಲೂಮೋದಿ' ಎಂದು ಕರೆದರೆ ಇನ್ನು ಕೆಲವರು ನನಗೆ 'ಹೈನೆಸ್' ಎಂದು ಕರೆಯುತ್ತಿದ್ದರು.

ಅಂತೂ ಕೊನೆಗೆ ಬೊಜ್ಜು ಕರಗಿಸುವ ಏಕೈಕ ಉಪಾಯವೆಂದು ಗುಂಡಮ್ಮ ನನ್ನನ್ನು ಶ್ರೀ ಯೋಗಾನಂದರ ಯೋಗಶಾಲೆಗೆ ಎಳೆದೊಯ್ದಳು. ಯೋಗ ಶಾಲೆಯ ದೃಶ್ಯವನ್ನು ಕಂಡು ನಾನು ಅವಾಕ್ಕಾದೆ.

ಒಂದು ದೊಡ್ಡ ಹಾಲ್. ಅದರ ಗೋಡೆಗಳನ್ನೆಲ್ಲ ಸ್ವಾಮಿ ವಿವೇಕಾನಂದರು ರಾಮತೀರ್ಥರು, ದಯಾನಂದ ಸರಸ್ವತಿ ಇತ್ಯಾದಿ ಪ್ರಭೃತಿಗಳು ಅಲಂಕರಿಸಿದ್ದಾರೆ. ಒಂದು ದೊಡ್ಡ ಜಮಖಾನೆಯನ್ನು ಹಾಸಲಾಗಿದೆ. ಅದರ ಮೇಲೆ ಸುಮಾರು ಹತ್ತಿಪ್ಪತ್ತು ಯೋಗಾಭ್ಯಾಸಿಗಳು ಯೋಗಾಸನಗಳಲ್ಲಿ ನಿರತರಾಗಿದ್ದರು. ಇವರೆಲ್ಲರ ಮಧ್ಯೆ ನೀಳಗಡ್ಡಧಾರಿ ಯೋಗಾನಂದರು ಮಂದಸ್ಮಿತರಾಗಿ ಅತ್ತಿತ್ತ ಅಡ್ಡಾಡುತ್ತ ವಿದ್ಯಾರ್ಥಿಗಳ ಯೋಗಾಭ್ಯಾಸವನ್ನು ಕರೆಕ್ಟಿಸುತ್ತಿದ್ದರು,

ಒಬ್ಬ ಹೊಟ್ಟೆಯ ಮೇಲೆ ಮಲಗಿ ಎದೆಯನ್ನು ಗೋಣನ್ನೂ ಮೇಲೆತ್ತಿ ತಾರಸಿಯನ್ನು ದಿಟ್ಟಿಸುತ್ತ ಕನ್ನಡ ಸಂಖ್ಯೆ ಏಳರ (೭) ಆಕೃತಿಯಾಗಿದ್ದ;

ಇನ್ನೊಬ್ಬ ಕನ್ನಡ ಸಂಖ್ಯೆ ಐದು (೫) ರಂತೆ ಬಲಗಾಲಿನ ಮೊಣಕಾಲಿಗೆ ಎಡಗೈಯನ್ನು ಸುತ್ತಿ ಹಿಂಬದಿಗೆ ಮುಖ ತಿರುವಿ ಶೂನ್ಯವನ್ನು ದಿಟ್ಟಿಸುತ್ತಿದ್ದ.

ಮೂರನೆಯವ ಬೆನ್ನಮೇಲೆ ಮಲಗಿ ಕಾಲುಗಳನ್ನೆಲ್ಲ ಮೇಲೆತ್ತಿ ಕೇವಲ ಬೆನ್ನಿನ ಆಧಾರದ ಮೇಲೆ ಇಡಿಯ ದೇಹವನ್ನೆತ್ತಿದ್ದ. ಇಂಗ್ಲೀಷಿನ ಆರರಂತೆ (6).

ಮತ್ತೊಬ್ಬನಂತೂ ಪೂರ್ತ ತಲೆಕೆಳಗಾಗಿ ನಿಂತುಬಿಟ್ಟಿದ್ದ. ಒಟ್ಟಿನಲ್ಲಿ ಬ್ರಹ್ಮ ಸೃಷ್ಟಿಸಿದ ಮಾನವ ದೇಹರಚನೆ ಸರಿಯಾಗಿಲ್ಲವೆಂದೂ ವಾಸ್ತವಿಕವಾಗಿ ತಲೆ ಇರುವ ಕಡೆಗೆ ಕಾಲುಗಳೂ, ಕುತ್ತಿಗೆ ಬಗಲಿನಲ್ಲಿಯೂ, ಮೂಗು ಮೊಣಕಾಲಿನ ಮೇಲೆಯೂ, ಹಾಗೂ ಕೈಗಳು ಬೆನ್ನಿಗೆ ನೇತುಬಿದ್ದಿರಬೇಕೆಂದೂ ಇವರೆಲ್ಲ ಸಿದ್ಧಮಾಡಿ ತೋರಿಸಲು ಹೊರಟಂತಿತ್ತು.

ಎಷ್ಟೋ ವರುಷಗಳ ಹಿಂದೆ ನಾನು ಚಿಕ್ಕವನಾಗಿದ್ದಾಗ "ಬಾಲನಾಗಮ್ಮ ಎಂಬ ಭಯಂಕರ ಚಿತ್ರ ನೋಡಿದ್ದೆ. ಅದರಲ್ಲಿ ಬಾಲನಾಗಮ್ಮನ ಮಗ ಹದಿ ಹರೆಯಾದ ಹಸುಳೆ ಏಳು ಸಮುದ್ರಗಳನ್ನೂ, ಒಂಭತ್ತು ಪರ್ವತಗಳನ್ನೂ ಹದಿ ನಾಲ್ಕು ಭೂಖಂಡಗಳನ್ನೂ ದಾಟಿ ಕೊನೆಗೆ ಮಾಯಾ ಫಕೀರನ ಗುಹೆಯನ್ನು ಪ್ರವೇಶಿಸುತ್ತಾನೆ. ಅಲ್ಲಿ ಥಳ ಥಳನೆ ಹೊಳೆಯುವ ಹೊನ್ನಿನ ಪಂಜರದಲ್ಲಿ ಮಾಯಾ ಫಕೀರನ ಪ್ರಾಣ ಪಕ್ಷಿ—ಪಂಚವರ್ಣದ ಗಿಳಿ ಇರುತ್ತದೆ. ಮತ್ತೂ ಈ ಗಿಳಿ ಯನ್ನು ಕಾಯಲು " as a last Barricade ಎನ್ನುವಂತೆ ನಾನಾರೂಪದ ರಾಕ್ಷಸರು ಪಂಜರವನ್ನು ಸುತ್ತಿರುತ್ತಾರೆ ಒಬ್ಬ ರಾಕ್ಷಸ ಅತ್ಯಂತ ಲಂಬೋದರ ನಿದ್ದರೆ, ಇನ್ನೊಬ್ಬ ಅತಿಕುಬ್ಜ, ಮತ್ತೊಬ್ಬ ಫಾಲಾಕ್ಷನಿದ್ದರೆ ಇನ್ನೊಬ್ಬನಿಗೆ ಕುಂಬಳಕಾಯಿ ತಲೆ, ಗೂನು ಬೆನ್ನು. ಇಬ್ಬರು ರಾಕ್ಷಸರಿಗೆ ಸಿಂಹದ ತಲೆಯಿದ್ದರೆ,

ಇನ್ನಿಬ್ಬರಿಗೆ ಗೂಗೆಯ ಮುಖ, ಮತ್ತಿಬ್ಬರಿಗೆ ಕತ್ತೆಯಬಾಲ. ಈ ಭಯಾನಕ ಚಿತ್ರ ನೋಡಿ ನನಗೆ ಆಗ ಎಚ್ಚರ ತಪ್ಪಿತ್ತೆಂದೂ ಮತ್ತೂ ಮುಂದೆ ಮೂರು ತಿಂಗಳು ಬಿಟ್ಟು ಬಿಡದೇ ಕಟ್ಟಿನ ಜ್ವರ ಬಂದಿತ್ತೆಂದೂ ನಮ್ಮ ತಾಯಿ ಹೇಳುತ್ತಾರೆ. ಆಗ ನನಗೆ ಕೇವಲ ಹದಿನೆಂಟು ವರುಷ,

ಅಂದಿನ ಯೋಗಾನಂದರ ಯೋಗಾಶಾಲೆ ನನಗೆ ಮಾಯಾ ಫಕೀರನ ಗುಹೆ ಯನ್ನು ಸ್ಮರಣೆಗೆ ತಂದಿತು. ಮತ್ತೂ ಶ್ರೀ ಮಾಯಾಫಕೀರರೇ........ಅಲ್ಲಲ್ಲ ಶ್ರೀ ಯೋಗಾನಂದರೇ ಮಾಯಾ ಫಕೀರನಂತೆ ಅತ್ತಿತ್ತ ಸುತ್ತಾಡುತ್ತಿರುವಂತೆ ತೋರಿತು. ನನ್ನನ್ನೂ ಮಾಯಾ ಫಕೀರನ ಒಬ್ಬ ಅಸಿಸ್ಟೆಂಟ್ ಎಂದು ನಿಯಮಿಸ ಲಾಯಿತು. ಹಾಗೂ ಮೊದಲ ದಿನದಿಂದಲೇ ಒಳ್ಳೇ ಸೀರಿಯಸ್ಸಾಗಿ ಯೋಗಾ ಭ್ಯಾಸ ಪ್ರಾರಂಭವಾಯಿತು.

ಉಳಿದವರೆಲ್ಲ ಸೊಂಟ ಬಗ್ಗಿಸಿ, ಎದೆ ಉಬ್ಬಿಸಿ, ಕುತ್ತಿಗೆಯನ್ನು ಕಿತ್ತಿ ಕಾಲ ಲ್ಲಿಟ್ಟು, ಕಾಲುಗಳನ್ನೆತ್ತಿ ಹೆಗಲ ಮೇಲೆ ಹಾಕಿಕೊಂಡು ಏನೆಲ್ಲ ದೊಂಬರಾಟ ನಡೆಸಿ ದ್ದರೂ ನಾನು ಮಾತ್ರ ಕೇವಲ ಬೆವರು ಸುರಿಸುತ್ತ, ಉಸಿರು ಬಿಡುತ್ತ ಒದ್ದಾಡುತ್ತಿದ್ದೆ. ನನ್ನ ಬ್ರಹ್ಮಾಂಡ ಹೊಟ್ಟೆ ಯಾವದಕ್ಕೂ ಅಸಹಕಾರ ಹೂಡುತ್ತಿತ್ತು.

ಶ್ರೀ ಮಾಯಾ ಫಕೀರರು ನನ್ನೆಡೆಗೆ ಕೃಪಾಪೂರ್ಣ ದೃಷ್ಟಿಯಿಂದ ನೋಡುತ್ತ ಮುಗಳ್ನಗೆಯಲ್ಲಿ ಮೊದಮೊದಲು ಹಾಗೇ ಆಗುವದೆಂದೂ ನಿರಾಶನಾಗಬಾರದೆಂದೂ ವಾತ್ಸಲ್ಯಪೂರಿತ ಧ್ವನಿಯಲ್ಲಿ ಅಪ್ಪಣೆ ಕೊಡಿಸುತ್ತಿದ್ದರು. ಹೊಸಬನಾದ್ದರಿಂದಲೋ ಅಥವಾ ನನ್ನ ನಾಜೂಕಿನ ತೆಳುವಾದ ದೇಹಯಷ್ಟಿಯನ್ನು ಕಂಡೋ ಉಳಿದೆಲ್ಲರೂ ಕೂಡ ನನ್ನೆಡೆಗೇ ನೋಡುತ್ತ ನನ್ನ ಹಾಲತ್ತಿಗೆ ಸಿಂಪಥಿಸುತ್ತಿದ್ದರು. ಕೊನೆಗೆ ಅವ ರೆಲ್ಲ ಒಟ್ಟಾರೆ ಯೋಗಾಭ್ಯಾಸದಿಂದ ಬೊಜ್ಜು ಕರಗುವದೋ ಅಥವಾ ಬೊಜ್ಜೇ ಯೋಗಾಭ್ಯಾಸವನ್ನು ಮುರುಗಿಸುವದೋ ಎಂದು ದೀರ್ಘವಾಗಿ ಯೋಚಿಸಿ ಕೊನೆಗೆ ನನ್ನಂತಹವರಿಗೆ 'ಶೀರ್ಷಾಸನ'ವೇ ರಾಮಬಾಣವೆಂದು ನಿರ್ಧರಿಸಿದರು.

ಸರಿ, ನನ್ನ ಜೀವನದ ಪ್ರಪ್ರಥಮ 'ಶೀರ್ಷಾಸನ'ಕ್ಕೆ ಅಣಿಯಾದೆ. ಮೊದಲ ನೆಯದಾಗಿ ನನ್ನ ಹೊಟ್ಟೆಯ ಮೇಲೆ ಕುಳಿತೆ. ವಿಶ್ವಪ್ರಯತ್ನ ಮಾಡಿ ಹೊಟ್ಟೆಯನ್ನು ಹೊಡೆದೆಬ್ಬಿಸಿ ತಲೆಯನ್ನು ನೆಲಕ್ಕೂ ತಾಗಿಸಿದೆ. ಇನ್ನು ಕಾಲುಗಳನ್ನು ಪೂರ್ತಿ ಮೇಲೆತ್ತಿ ತಲೆಯ ಮೇಲೆ ನಿಂತು ಬಿಟ್ಟರೆ ಅದುವೇ "ಶೀರ್ಷಾಸನ"

ನನ್ನ ಸಹಾಯಕ್ಕೆಂದು ಹಿಂದಿಬ್ಬರು ಮುಂದಿಬ್ಬರು ವಿದ್ಯಾರ್ಥಿಗಳು ನಿಂತರು (ನಾವೇ ತಲೆಕೆಳಗಾದಾಗ ಹಿಂದೆ ಯಾರು ಮುಂದೆ ಯಾರು ಎಂದು ಹೇಳುವದು

ಕಠಿಣವಲ್ಲವೇ ?) ಸ್ವತಃ ಶ್ರೀ ಮಾಯಾ ಫಕೀರರು ಬದಿಗೆ ನಿಂತು ಈ "Operation ಶೀರ್ಷಾಸನ" ವನ್ನು ನಿರ್ದೇಶಿಸುತ್ತಿದ್ದರು.

"ಹೂಂ"

"ಮೇಲೆ"

"Good ಇನ್ನೂ ಸ್ವಲ್ಪ ಮೇಲೆ."

"Buck up"

"Excellent"

"ಇನ್ನೂ........ good"........

ಇತ್ಯಾದಿಯಾಗಿ ನಾಲ್ಕೂ ಕಡೆಗಳಿಂದ ಸಲಹೆಗಳೂ, ಉತ್ತೇಜನಗಳೂ, ವಾಹ ವ್ವಾಗಳೂ, ಶಹಬಾಷ್‌ಗಳೂ ಬರುತ್ತಿದ್ದವು. ಕೊನೆಗೂ ಧೈರ್ಯವಾಡಿ ಹೊಟ್ಟೆಯನ್ನು ಲೆಕ್ಕಿಸದೇ ಎರಡೂ ಕಾಲುಗಳನ್ನು ಒಮ್ಮೆಲೇ ಮೇಲೆತ್ತಿಬಿಟ್ಟೆ.

ಆಹಾ ! 'ಶೀರ್ಷಾಸನ'ದ ಆ ಸುಖವನ್ನೆಂತು ಬಣ್ಣಿಸಲಿ ! !

"ಒಂದು ಕ್ಷಣ—ಒಂದೇ ಕ್ಷಣ.

ಅದುವೇ ಯೋಗದಂತಿಪು ಕ್ಷಣ.

ಒಂದೇ ಒಂದು ಕಳೆದ ಚಣ

ಮುಗಿಯಿತೆನಗೆ ಯೋಗದ ಋಣ.

ನನ್ನ ಚೋಲಿ ತಪ್ಪಿ,—ಬಿರುಗಾಳಿಗೆ ಸಿಕ್ಕಿದ ಬೃಹದ್ ಮರವೊಂದು ಕುಯ್ಯೊ ಮರ್ರ‍್ರೊ ಎನ್ನುತ್ತ ಕಿರುಚಿ ಕಿರುಚಿ, ಹಿಂದೆ ಮುಂದೆ ಜಾಲಾಡಿ ತೂರಾಡಿ ಕೊನೆಗೆ ಕಿರ್ರ‍್ರೊsss........ ಎಂದು ಶಬ್ದ ಮಾಡುತ್ತ ಒಂದು ಕಡೆಗೆ ವಾಲಿ ಧೊಪ್ಪನೆ ನೆಲಕ್ಕೆ ಬೀಳುವಂತೆ. ನಾನು ಹಿಂದೆಯೋ ಮುಂದೆಯೋ ಬಿದ್ದು ಬಿಟ್ಟೆ. ನನ್ನ ಹಿಂದೆ ಇದ್ದ ಇಬ್ಬರು ವಿದ್ಯಾರ್ಥಿಗಳಲ್ಲಿ ಒಬ್ಬನ ಕನ್ನಡಕಕ್ಕೆ ಕಾಲು ತಾಗಿ ಅದು ಪೂರ್ತಿ ನುಚ್ಚು ನೂರಾಗಿತ್ತು. ಇನ್ನೊಬ್ಬನಿಗೆ ಹಿಮ್ಮಡಿ ತಾಗಿ ಅವನ ಕಿವಿ ಹರಿದು ನೆತ್ತರು

ಸೋರುತ್ತಿತ್ತು. ಮುಂದಿನವರಲ್ಲಿ ಒಬ್ಬನ ಮೂಗಿಗೆ ಪೆಟ್ಟುಬಿದ್ದು ಅವನು ವಿಕಾರವಾಗಿ ಕಿರುಚಿಕೊಳ್ಳುತ್ತಿದ್ದ. ಇನ್ನೊಬ್ಬನ ಬನಿಯನ್‌ನಲ್ಲಿ ಕಾಲು ಸಿಕ್ಕಿ ಅದು ಚರ್ರೆನ್ನುತ್ತ ಪೂರ್ತಿಯಾಗಿ ಹರಿದು. ಜಾಕೀಟಿನ ಆಕಾರ ತಾಳಿತು. ಬೀಳುವಾಗ ಎಡಕ್ಕೆ ವಾಲಿ ಆಧಾರಕ್ಕೆಂದು ಶ್ರೀ ಫಕೀರರ ಗಡ್ಡವನ್ನು ಹಿಡಿದು ಕೊಂಡಿದ್ದರಿಂದ ಅವರ ಅರ್ದಗಡ್ಡ ನನ್ನ ಕೈಯಲ್ಲಿತ್ತು.

ೲ ೲ ೲ ೲ ೲ ೲ

ಇಷ್ಟೆಲ್ಲ ಆದಮೇಲೆ ಯೋಗಾದ ಮೇಲೆ ಯಾರಿಗಿರುವದು ನಿಗಾ. ಅಂದಿನ ವರ್ಗವನ್ನು ಬೇಗನೇ ಮುಗಿಸಲೆಂದು ಹರಕು ಗಡ್ಡದ ಯೋಗಾನಂದರು ಎಲ್ಲರಿಗೂ 'ಶವಾಸನಾಸೀನ'ರಾಗಲು ಕರೆಯಿತ್ತರು. ಯೋಗಾದ ವಿದ್ಯಾರ್ಥಿಗಳಿಗೆಲ್ಲ ಶವಾಸನ ಅತಿ ಆಕರ್ಷಣೆಯ ದಿನದ ಕೊನೆಯ ಪಾಠ.

ಬೆನ್ನಮೇಲೆ ಮಲಗಿ ಕೈಕಾಲುಗಳನ್ನು ಅಗಲಿಸಿ, ಸಡಿಲಿಸಿ, ಕಣ್ಣುಮುಚ್ಚಿ, ವಿಚಾರಶೂನ್ಯರಾಗಿ, ದೇಹಕ್ಕೂ ಮನಸ್ಸಿಗೂ ಯಾವುದೇ ಕೆಲಸ ಹಚ್ಚದೇ, ಆದರೆ ನಿದ್ರೆ ಹೋಗದೇ ಶಾಂತಿಯಿಂದ ಬಿದ್ದುಕೊಳ್ಳುವುದೇ-ಶವಾಸನ. ಒಮ್ಮೆ ಬಿದ್ದುಕೊಂಡಮೇಲೆ ಕೈಕಾಲುಗಳನ್ನು ಅಲುಗಾಡಿಸಬಾರದು.

ಅತಿ ಸುಲಭವೆಂದು ಕಂಡರೆ ಪ್ರಯತ್ನಿಸಿ ನೋಡಿ. ಆಗ ತಿಳಿದೀತು ಕಷ್ಟ. ಅಂದು ನಾನೂ ಬಿದ್ದುಕೊಂಡೆ. ಇನ್ನೇನು ಶೂನ್ಯವನ್ನು ತಲುಪಿತು ಶಾಂತಿಯನ್ನನುಭವಿಸುವೆನೆಂದಾಗ, ನಾಸಿಕದ ಮೇಲೊಂದು ನೊಣ ! ಆದಾಗಿ ಕಲವು ನಿಮಿಷಕ್ಕೆ ಬೆನ್ನು ತುರಿಕೆ.

ಈ ದೈಹಿಕ ನವೆಗಳನ್ನೆಲ್ಲ ಹೇಗೋ ಪರಿಹರಿಸಿ ಬಿದ್ದುಕೊಂಡೆ. ಇನ್ನು ಮನಸ್ಸನ್ನು ನಿಯಂತ್ರಿಸಿ ವಿಚಾರ ಶೂನ್ಯನಾದೆನೆಂದರೆ ಮುಗಿಯಿತು ಶವಾವಸ್ಥೆಯನ್ನು ತಲುಪಿದಂತೆಯೇ. ಅದರೆ ಈ ಗುಂಡಮ್ಮ ಕೇಳಬೇಕಲ್ಲ.

ಈಗಲೇ ಅವರೇಕಾಳು ಉಪ್ಪಿಟ್ಟನ್ನು ಮಾಡುತ್ತಿದಾಳೆ.—

....ಬಾಯಲ್ಲಿ ನೀರು—————.....

ನಮ್ಮ ಅತ್ತೆ ಬ್ಯಾಡಿಗಿ.ಮೆಣಸಿನಕಾಯಿ ಹುರಿದು ಮಸಾಲೆ ಮಾಡುತ್ತಿದ್ದಾರೆ ...........—...ಕಣ್ಣಲ್ಲಿ ನೀರು, ಮೂಗಿನಲ್ಲಿ ಘಾಟು—...

ಛೀ, ಛೀ.... ಶೂನ್ಯನಾಗು – ವಿಚಾರಶೂನ್ಯನಾಗು ಎನ್ನುತ್ತಿದ್ದಂತೆಯೇ ಕಾಲೇಜಿನ ಗೆಳತಿ 'ನಾಗೂ' ಬಳುಕುತ್ತ, ಜಡೆ ತುಳುಕಸುತ್ತ, ಬರುತ್ತಾಳೆ... .... ....ಕೈಯಲ್ಲಿ ಲಟ್ಟಣಿಗೆ ಹಿಡಿದುಕೊಂಡು ಗುಂಡಮ್ಮ 'ನಾಗೂ'ನನ್ನು ಅಟ್ಟಿಸಿ ಕೊಂಡು ಬರುತ್ತಾಳೆ.......... ಮೊನ್ನೆ ಮೊನ್ನೆ ಕಂಟ್ರಾಕ್ಟರ್ ಶಿವಣ್ಣ ಮೂರು ಬಿಲ್ಲುಗಳನ್ನು ಪಾಸು ಮಾಡಿಸಿಕೊಂಡು ಕೇವಲ ಎರಡೇ ನೂರು ಕೊಟ್ಟಿದ್ದಾನೆ. ಸೂ....... ಮಗ ...

ಅಯ್ಯೋ ದೇವರೆ – ನಾನೆಂತು ವಿಚಾರ ಶೂನ್ಯತೆಯನ್ನು ಸಾಧಿಸಲಿ ? ಅದೆಂತು ಮನಶ್ಯಾಂತಿಯನ್ನನುಭವಿಸಲಿ ?

....... ಬಾಸು ಭೀಮರಾವು ಟೈಪಿಸ್ಟ್ ತಾರಾ....ಮುನಿಮಾಲೀಕ ಮಾದಯ್ಯ .......ಏನಾದರೂ ಬರೆಬರೆ ಎಂದು ನಕ್ಷತ್ರಿಕನಂತೆ ಬೆನ್ನು ಬಿದ್ದಿರುವ ಶಿವ್ಕೂ............ ಪಕ್ಕದ ಮನೆಯವನ ಎಳೇ ಹೆಂಡತಿ ಆ....ಎಲ್ಲರೂ ಆತಂಕ ತರುತ್ತಾರೆ ನನ್ನ ಮನಶ್ಯಾಂತಿಗೆ ವಿಚಾರಶೂನ್ಯತೆಗೆ.

ಏನು ಮಾಡಲಿ ? ಏನು ಮಾಡಿದರೆ ಈ ಗುಂಡಮ್ಮ, ಶಿವ್ಕೂ ನಾಗೂ - ಭೀಮರಾವು ಇವರನ್ನೆಲ್ಲ ಮನಸ್ಸಿನಿಂದ ಓಡಿಸಬಲ್ಲೆ ? ಅದಾವ ಕಾಲ್ಪನಿಕ ಚಿತ್ರ ಮೆಲ್ಲ ಮೆಲ್ಲನೇ ಇವರನ್ನೆಲ್ಲ ನನ್ನ ಮನಃ ಪಟಲದಿಂದ ಅಳಿಸಿಹಾಕಿ – ಅಲ್ಲಿ – ಶಾಂತಿ ಯನ್ನು ತಂದೀತು ಎಂದು ಕಾತುರನಾಗಿದ್ದಾಗ....ಯುರೇಕಾ........

ನನ್ನ ಬಾಲ್ಯದ ಸವಿಗನಸನ್ನು ನೆನಸಿಕೊಂಡೆ, ಎಂತಹ ಸುಂದರ ಕಲ್ಪನೆ ಏನು ಮಧುರ ವಿಚಾರ, ಎಷ್ಟು ಶಾಂತಿ ?

ನಮ್ಮ ಗಣಿತದ ಮೇಷ್ಟರು ಶ್ರೀ ನರಸಿಂಹಯ್ಯನವರು ತೀರಿಕೊಂಡಂತೆಯೂ ಅವರ ಬೆತ್ತದಿಂದಲೇ ಅವರ ಚಿತೆಗೆ ಅಗ್ನಿ ಸ್ಪರ್ಶ ಮಾಡಿಸಿವಂತೆಯೂ ಒಂದು ಸುಖಾ ವಹವಾದ ಕಲ್ಪನೆ ಎಳೆ ಎಳೆಯಾಗಿ ನನ್ನ ಮನಃಪಟಲದ ಮೇಲೆ ಬಿಚ್ಚಿಕೊಳ್ಳಲಾ ರಂಭಿಸಿತು. ಅವರ ಶ್ರಾದ್ಧದ ಊಟಕ್ಕೆ ಪಂಕ್ತಿಯಲ್ಲಿ ಕುಳಿತಂತೆ, ಉದ್ದಿನ ವಡೆ ಸಜ್ಜಿಗೆಯ ಲಾಡು ತಿನ್ನುತಿದ್ದಂತೆ.........ಆಹಾ ಎಷ್ಟು ಶಾಂತಿ....ಶಾಂತಿ, ಶಾಂತಿ........

ಯಾವಾಗ್ಗಾಢ ನಿದ್ದೆ ಬಿದ್ದಿತ್ತೊ ತಿಳಿಯದು. ಕಣ್ಣು ಬಿಟ್ಟಾಗ ಶ್ರೀ ಮಾಯಾ ಫಕೀರರೂ ಉಳಿದ ಆಸಿಸ್ಟಂಟರುಗಳೂ ನನ್ನ ಸುತ್ತ ಕುಳಿತಿದ್ದರು, ಎಲ್ಲೊ ದೂರ ದಿಂದೆಂಬಂತೆ ಅವರ ಒಂದೊಂದೇ ಮಾತು ಕಿವಿಗೆ ಬೀಳುತ್ತಿತ್ತು.

" ಬಿ. ಪಿ. ಇತ್ತೋ ಏನೋ ? "

" ಛೇ, ಛೇ, ಉಸಿರಾಟ ಇನ್ನೂ ಇದೆ.


" ಡಾಕ್ಟರನ್ನು ಕರೆತನ್ನಿ ........ಇತ್ಯಾದಿ ಇತ್ಯಾದಿ.

ನಾನು ಪ್ರಸನ್ನವದನನಾಗಿ ಮೆಲ್ಲನೇ ಕಣ್ಣು ಬಿಟ್ಟಾಗ ಎಲ್ಲರೂ ದೀರ್ಘವಾಗಿ ನೆಮ್ಮದಿಯ ನೀಳುಸಿರು ಬಿಟ್ಟರು. ಶ್ರೀ ಯೋಗಾನಂದರು (ಮಾಯಾ ಫಕೀರರು) ಅರ್ಧ ವಿಸ್ಮಯದಲ್ಲಿ ಅರ್ಧ ಕೋಪದಲ್ಲಿ "ಏನು ಸ್ವಾಮಿ ನೀವು ಶೀರ್ಷಾಸನದಿಂದ ನೇರವಾಗಿ ದೊಪ್ಪನೇ ಶವಾಸನದಲ್ಲಿಯೇ ಬಿದ್ದಿರಿ. ಮೇಲೆ ಈ ಪರಿ ನಿದ್ರೆ ... ಬಿಡಿ ಬಿಡಿ ಯೋಗಾಸನಗಳೆಲ್ಲ ನಿಮಗೆ ಹೇಳಿದ್ದಲ್ಲ........ಶವಾಸನದಲ್ಲಿ ಯಾರಾದರೂ ನಿದ್ದೆ ಹೋಗುತ್ತಾರೆಯೇ ? " ಎಂದು ಹೀಯಾಳಿಸಿದರು. ಮತ್ತೂ ಯೋಗಾಭ್ಯಾಸವನ್ನು ಅದರ ಪಾಡಿಗೆ ಬಿಟ್ಟು ಬಿಡಬೇಕೆಂದು ಅತ್ಯಂತ ಕಳಕಳಿಯಿಂದ ಕೇಳಿಕೊಂಡರು.

ಈ ರೀತಿಯಾಗಿ ನಾನು ಯೋಗವನ್ನು ತ್ಯಾಗ ಮಾಡಬೇಕಾಯಿತು.

---

## ಚುನಾವಣೆಯ ನಂತರ....



"ರಾತ್ರೋ ರಾತ್ರಿ ಬಂದು ಭಾಷಣ ಮಾಡಿದ್ರೂ ಮೋಸ ಮಾಡಿಬಿಟ್ರಲ್ಲಾರೀ ಮಗೂಗೆ! ಎಂಥ ಅನ್ಯಾಯ!"

# ಹೊರಗೆ-ಒಳಗೆ

—ಆನಂದ್

ಹುಡುಗಿ : ಸಾರ್, ನಾನೂ ಒಂದು ದಿನ ಎಂ. ಎಸ್. ಥರಾ ಹಾಡ್ತೀನಾ?

ಸಂಗೀತದ ಮೇಷ್ಟರು ; "ಯಾಕಾಗಲ್ಲಾಮ್ಮ ಮನಸ್ಸಿದ್ದರೆ ಯಾಕಾಗಬಾರದು"

(ಅಂತರಂಗ) ; ಮನಸ್ಸಿದ್ರೂ ಗಂಟಲು ಹೀಗೆ ಕೀರ್ಲಾಗಿದ್ರೆ ಎಂ. ಎಸ್ ಆದ್ಹಾಗೇ!

* * * * *

ಗಿರಾಕಿ ; ಒಗೆದರೆ ಬಣ್ಣ ಹೊಗೋಲ್ಲ ತಾನೆ?

ಅಂಗಡಿ ಮಾಲೀಕ : "ಛೆ ಎಲ್ಲಾದ್ರೂ ಉಂಟೆ ಸ್ವಾಮಿ!"

(ಅಂತರಂಗ) ; ಗ್ಯಾರಂಟಿ ಬಣ್ಣದ ಬಟ್ಟೆ ಮಾರಿ ಮಾರಿ ನಾನೇನು ಹರಿಶ್ಚಂದ್ರ ಆಗಲೇ?

* * * * *

ಸೈಟು ಅಭ್ಯರ್ಥಿ : "ನನ್ನ ಶಕ್ತಿ ಮೀರಿ ಕಾಣಿಕೆ ಕೊಟ್ಟಿದೀನಿ ಸಾರ್, ತಾವು ಕೃಪೆ ಮಾಡಬೇಕು!"

ಅಧಿಕಾರಿ ; "ಎರಡುವಾರ ಬಿಟ್ಟು ಬನ್ನಿ, ನಿಂ ಕೆಲಸ ಆದ್ಹಾಗೇ"

(ಅಂತರಂಗ ; ನನಗೆ ವರ್ಗ ಆಗಿರೋದು ಇದಕ್ಕೆ ಗೊತ್ತಿಲ್ಲ!)

* * * * *

ಗಂಡ : "ರಾತ್ರಿ ಲೇಟಾಗತ್ತೆ ಕಣೇ ಇವತ್ತು, ಸ್ವಲ್ಪ ಕೆಲಸ ಬಾಕಿ ಇದೆ ಆಫೀಸಲ್ಲಿ"

ಹೆಂಡತಿ : "ನಿಂ ಕೆಲಸ ಇದ್ದೇ ಇರತ್ತೆ. ಸರಿ ಆದಷ್ಟು ಬೇಗ ಬನ್ನಿ"

(ಅಂತರಂಗ : ಗಂಡ : ಇಸ್ಪೀಟು ಕಛೇರಿಗೆ ಅನುಕೂಲ ಆಯ್ತು!

ಹೆಂಡತಿ : ಸರೋಜ ಬರ್ತಾಳೆ ಸಂಜೆ, ಇವರು ಬೇಗ ವಕ್ಕರಿಸಿದರೆ ಕಾಡಹರಟೆಗೆ ಧಕ್ಕೆ!)

# ಸಂಭಾಷಣೆ

—ಲೀಲಾ ಮಿರ್ಜಿ

ಭಗವಂತ ಮನುಷ್ಯರಿಗೆ ದಯಪಾಲಿಸಿರುವ ವರಗಳಲ್ಲಿ, ಸಿಟಿ ಬಸ್ಸಿನಲ್ಲಿನ ಪ್ರಯಾಣವೂ ಒಂದೆಂದರೆ ತಪ್ಪಾಗಲಾರದು. ಅನೇಕ ವೇಳೆ, ನಮ್ಮ ಹಿಂದಿನ ಅಥವಾ ಮುಂದಿನ ಸೀಟಿನಲ್ಲಿ ಸ್ವಾರಸ್ಯವಾದ ಸಂಭಾಷಣೆ ಕೇಳುವ ಪುಣ್ಯ ಲಭಿಸುತ್ತದೆ.

ಮೊನ್ನೆ ಹಾಗೇ ಆಯ್ತು. ನಮ್ಮ ಅಕ್ಕ ಇರೋದು ಜಯನಗರದಲ್ಲಿ. ನಾನಿರೋದು ಮಲ್ಲೇಶ್ವರದಲ್ಲಿ. ಅಕ್ಕನ ಮನೆಗೆ ಹೋಗಲು ಟರ್ಮಿನಸ್ಸಿನಲ್ಲೇ ಬಸ್ಸ್ ಹಿಡಿದೆ. ಎದುರಿನ ಸೀಟಿನಲ್ಲಿ ಆಗಲೇ ಇಬ್ಬರು ಹೆಂಗಸರು ಕೂತಿದ್ದರು. ಧಡೂತಿ ಆಕೆಗೆ ಸುಮಾರು ಐವತ್ತೈದಾಗಿರಬೇಕು. ಆಕೆಯ ಪಕ್ಕದವರೂ ಸುಮಾರು ಅದೇ ವಯಸ್ಸಿನವರ ಹಾಗೆ ಕಾಣುತ್ತಿದ್ದರು. ಬಸ್ಸ್ ಹೊರಟಿತು. ನಮ್ಮ ಬಸ್ಸ್ ಭಗಿನಿಯರಿಬ್ಬರ ಸಂಭಾಷಣೆಯೂ ಶುರುವಾಯಿತು.

" ಸಂತೋಷದ ಸುದ್ದಿ ಕೇಳಿದೆ. ಸುಶೀಲ ಹೇಳಿದಳು ನಿಜವೇ ? ನಾನು ಊರಲ್ಲಿರಲಿಲ್ಲ."

" ಹೂಂ, ಹೌದು ಸಾವಿತ್ರಿ

" ನಿಜವಾಗಲೂ ನೀವು ಪುಣ್ಯವಂತರಮ್ಮ. ಹುಡುಗಿ ಹ್ಯಾಗೆ ? ಕೆಲಸ ಬರತ್ತೆ ? ಸ್ವಭಾವ ಹ್ಯಾಗೆ ಏನು ?

" ಒಳ್ಳೆಯವಳ ಹಾಗೆ ಕಾಣ್ತಾಳೆ. ನೋಡಬೇಕು. ಹೊಸದರಲ್ಲಿ ಎಲ್ಲಾ ಚೆನ್ನವೇ ಅಲ್ಲವೇ ?"

ವಿಮೆನ್ಸ್ ಲಿಬರೇಶನ್ ಬಗ್ಗೆ ಸದಾ ಇಂಗ್ಲೀಷ್ ಪತ್ರಿಕೆಗಳಲ್ಲಿ ಏನಾದರು ಓದುತ್ತಿರುವ ನನಗೆ, ಈ ಸಂಭಾಷಣೆಯನ್ನು ಕೇಳಿ ರೇಗೇ ಹೋಯಿತು. ಅಲ್ಲಾ, ಮಗಂಗೆ ಮದುವೆಯಾಗಿರಬೇಕು. ಮನೆಗೆ ಬಂದ ಹುಡುಗಿ ಮೇಲೆ ಆಗಲೇ ಟೀಕೆ, ಟಿಪ್ಪಣಿ. ಅತ್ತೆಯ ಸ್ವಭಾವ ಚೆನ್ನಾಗಿದ್ದರೆ, ಸೊಸೆಯೂ ಒಳ್ಳೆಯವಳಾಗೇ ಇರ್ತಾಳೆ. ಸೊಸೆನ ಹೀಗೆ ಶುರುವಿನಿಂದಲೇ ಅನುಮಾನದಿಂದ ಕಂಡರೆ, ಅವಳಿಗೆ ತಾನೆ ಇವರ ಮೇಲೆ ವಿಶ್ವಾಸ ಹ್ಯಾಗ್ ಬರುತ್ತೆ ?

" ಅಡಿಗೆ ಎಲ್ಲಾ ಬರುತ್ತೊ, ಹ್ಯಾಗೆ. ನಿಮ್ಮ ಯಜಮಾನ್ರು ಬೇರೆ ಬೇಗ ಮನೆ ಬಿಡ್ತಾರೆ. ಅಷ್ಟೊತ್ತಿಗೆ ತಿಂಡಿ ಮಾಡಿರ್ತಾಳೆಯೆ ? "

" ಹೂಂ, ಐದಕ್ಕೇ ಏಳ್‌ತಾಳೆ. ಟೈಂಗೆ ಸರಿಯಾಗಿ ತಿಂಡಿ ಏನೊ ಮಾಡ್ ತಾಳೆ.

ಅಬ್ಬ ! ಈ ಇಬ್ಬರು ಹೆಂಗಸರು ಯಾವ ಶತಮಾನದಲ್ಲಿದ್ದಾರೊ ಅನ್ನಿಸ್ತು ನಂಗೆ. ಅಲ್ಲಾ, ಮಗನ ಹೆಂಡತಿ ಅಂದ್ರೆ, ಅಡಿಗೆಯವಳು ಅನ್ಕೊಂಡಿದಾರೆಯೇ ಈ ಕಾಲದಲ್ಲೂ ಬೇಗ ಎದ್ದು ಮಾವಂಗೆ ತಿಂಡಿ ಮಾಡಿಕೊಡುವ ಸೊಸೆಯರೂ ಇದ್ದಾರೆಯೇ, ಆಶ್ಚರ್ಯವೇ ಸರಿ. ಇಂಥಾ ಹುಡುಗಿಯರು ಇರೊ ಹೊತ್ತಿಗೇನೇ ಸಮಾಜ ಹೆಂಗಸರನ್ನ ತುಳಿದು ಹಾಕ್‌ತಾ ಇರೋದು. ಈ ಅಂಧಕಾರದಲ್ಲಿರುವ ಸ್ತ್ರೀಯರನ್ನು ನೆನೆದು ಮನಸ್ಸು ಕಸಿವಿಸಿಯಾಯಿತು.

" ಅಂತೂ ಪರವಾಗಿಲ್ಲಾ ನಿಮಗೂ ಆಪರೇಶನ್ ಆದ್‌ಮೇಲೆ ಕೆಲಸ ಮಾಡಲು ಕೈಲಾಗಲ್ಲಾ. ಅಂತ್ತಿದ್ರಿ, ಟೈಂಗೆ ಸರಿಯಾಗಿ ವರ ಕೊಟ್ಟಾ ಹಾಗಾಯ್ತು ನಿಮಗೆ"

" ನಿಜ ಸಾವಿತ್ರಿ, ನನ್ನ ಪುಣ್ಯ ಅಂತಾನೇ ಅನ್ನಬೇಕು. ಮನೆ ಕಡೆ ಯೋಚ ನೆಯೇ ಇಲ್ಲದೆ ಓಡಾಡಿಕೊಂಡಿರಬಹುದು ಈಗ.

ಅಷ್ಟಲ್ಲದೇ ಮತ್ತಿನ್ನೇನು. ಇನ್ನೊಬ್ಬರ ಮನೆ ಹೆಣ್ಣು ಮಗಳನ್ನ ಗಾಣದ ಎತ್ತಿನ ಹಾಗೆ ಉಪಯೋಗಿಸಿಕೊಳ್ಳಕ್ಕೆ ಮನಸ್ಸಾದ್ರೂ ಹ್ಯಾಗ್ ಬರತ್ತೊ ಈಕೆಗೆ ಎಂಥಾ ಕಠಿಣ ಹೃದಯ. ಈಕೆಯೂ ಒಬ್ಬ "ಸೀಮೆ ಎಣ್ಣೆ ಅತ್ತೆ" ಯೇ ಇರಬೇಕು ಅನ್ನಿಸ್ತು.

" ನಿಮ್ಮಂಥವರ ಮನೆ ಸಿಗಕ್ಕೆ ಹುಡುಗಿ ಪುಣ್ಯ ಮಾಡಿರಬೇಕು. ಮಗಳನ್ನ ನೋಡಿಕೊಂಡ ಹಾಗೆ ನೋಡ್‌ಕೊತೀರ "

ಅಬ್ಬ ! ಎಂಥಾ ಪುಣ್ಯ ! ಹಗಲು ರಾತ್ರಿ ಚಾಕ್ರಿ ಮಾಡೊ ಮಗಳನ್ನ ಎಲ್ಲೂ ಕಾಣೆ. ಅದೆಲ್ಲಾ ಸೊಸೆಯರ ಪಾಲಿಗೆ ಬಂದ ಪಂಚಾಮೃತ !

" ಮಾತಾಡ್ತಾ ಮರೆತೇ ಹೋಯ್ತು. ಮುಂದಿನ ಸ್ಟಾಪಿನಲ್ಲಿ ಇಳೀ ಬೇಕು. ಅಂದಹಾಗೆ ಆ ಅಡಿಗೆ ಹುಡಿಗೀಗೆ ಏನ್ ಸಂಬಳ ಕೊಡ್ತಿರಾ ?

" ಸಧ್ಯಕ್ಕೆ ನೂರಿಪ್ಪತ್ತು ರೂಪಾಯಿ.

ಸುಸ್ತಾಯಿತು ನಂಗೆ ! ಇನ್‌ಮೇಲೆ ಈ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಲೇಖನ ಗಳನ್ನ ಓದೋದನ್ನ ಖಂಡಿತ ಕಮ್ಮಿ ಮಾಡ್‌ಬೇಕು. ☆☆

# ಹನಿಗವನಗಳು

—ಸವಿತಾ ನಾಗಭೂಷಣ

## ಜೂಲಿ

ಹತ್ತಿಯಷ್ಟು ಬಿಳುಪು, ಹೂವಿನಷ್ಟು ಹಗುರು
ಪುಟು ಪುಟು ನಡಿಗೆ ಬಲು ಚುರುಕು
ಕಣ್ಣು ಕಡು ನೀಲಿ ಉರುಟುರುಟು ಗೋಲಿ
ಬಲು ಸೊಗಸು ಮೂಸಿ ನೋಡುವ ಶೈಲಿ
ಬೊಗಳಿದರೆ ಹಾಡಿದಂತೆ ಲಾಲಿ-ಹೆಸರು ಜೂಲಿ

ಬಡಕಲು ಬೀದಿ ನಾಯಿಯ ಜೊತೆ ಇದರ ಪ್ರೀತಿ
ಕೊಳಕು ಮುಸುಡಿಗೆ ಮುದ್ದಿಡುವ ರೀತಿ
ಸಾವಿರ ತೆತ್ತಾಗ ಸಪಾಟು ಮಲಗಿತ್ತು ಮತಿ
ಕೊನೆಗೂ ಮೋಸ ಮಾಡಿತಲ್ಲಾ ಈ ಜಾತಿ !

## ದೀವಳಿಗೆಯಂದು

ಬೆಳಗಿನಿಂದ ಸಂಜೆಯವರೆಗೂ
ಒಂದೇ ಸವನೆ
ಹೊತ್ತಿಕೊಂಡುರಿಯುತ್ತಿತ್ತು
ನನ್ನವಳ ಕಿರಿಕಿರಿ ಕಡ್ಡಿ !

## ಸ್ತ್ರೀ ವಿಮೋಚನೆ

ವೇದಿಕೆಯ ಮೇಲೆ.
ಸಿಡಿಯಿತು ಮಾತಿನ ಅರಳು
ಮಿಂಚಿತು ಮೂಗುತಿ ಹರಳು
ಮರುಳಾದರು ಜನರು
ಮಾತಿನ ಸಂಚಿಗೆ ಕೆಲವರು !
ಮೂಗುತಿಯ ಮಿಂಚಿಗೆ ಹಲವರು !!

## ಮೂಗ

ಮಾತಿನ ಮಲ್ಲ
ಎಂದೇ ಊರೆಲ್ಲಾ
ಹೆಸರುವಾಸಿಯಾದ ಹುಡುಗ
ನನ್ನೆದುರು ಮೂಗ !

# ರಿಲೇಟಿವಿಟಿ

—ಕೇಫ

"ರಿಲೇಟಿವಿಟಿ ಅಂದ್ರೆ ಏನ್ರಿ ?"—ಅಂತ ಮದ್ದೂರು ವಡೆ ಕೇಳಿದರು.

"ರಿಲೇಟಿವಿಟೀ ಅಂದ್ರೆ—ಪ್ರಾಯಶಃ—ತಮಿಳರು ಸಂಬಂದಿ ಶಂಡೆ ಅಂತ ಹೇಳ್ತಾರಲ್ಲಾ—ರಿಲೇಟಿವ್ಸ್‌ನಲ್ಲೇ ಶಂಡೇ—ಅಂದ್ರೆ ಜಗಳ—ಅದೇ ಇರಬೇಕು" ಅಂದರು ಬಾಳೇಕಾಯಿ ಬಜೆ.

ವಿರಾಟ ಭವನದಲ್ಲಿ ನಮ್ಮ ದೈನಂದಿನ ಕೂಟಗಳಲ್ಲಿ ಈ ರೀತಿ ಹಠಾತ್ತಾಗಿ ಆಳವಾದ ವಿಚಾರಗಳು ಏಳೋದುಂಟು, ಪರಶು—ಇನ್ನೂ ನಮ್ಮ ನಮ್ಮ ಮಾಮೂಲು ತಿನಿಸುಗಳನ್ನು ಹಂಚಿರಲಿಲ್ಲ. ಕೂಟದ ಸದಸ್ಯರ ಮನಸ್ಸು ಇತರೇ ವಿಚಾರಗಳಲ್ಲಿ ತೊಡಗಿತ್ತು. ರಿಲೇಟಿವಿಟಿ—ಮದ್ದೂರ ವಡೆ ಮನಸ್ಸನ್ನು ಆಕ್ರಮಿಸಿತ್ತು.

ಬಾಳೇಕಾಯಿ ಬಜೆ ವ್ಯಾಖ್ಯಾನ—ಮದ್ದೂರು ವಡೆಗೆ ಸರಿಯೆನಿಸಲಿಲ್ಲ.

"ಇನ್‌ಸ್ಟೀನ್ ಅನ್ನೋವ ಮನೇಲಿ ಸಂಬಂದೀ ಶಂಡೆ ಆದ್ರೆ ನಮ್ಮ ವಿಜ್ಞಾನಿಗಳೆಲ್ಲಾ ಯಾಕ್ರೀ ತಲೆ ಕೆಡಿಸ್ಕೋಬೇಕು ? ಅಂತ ಮ್ಮವ, ಕೇಳಿದರು.

ಪರಶು ಬಂದು ಎಲ್ಲರ ಮುಂದೂ ಗರಮ್ ಗರಮ್ ತಿನಿಸುಗಳಿಟ್ಟಿದ್ದರಿಂದ ಚರ್ಚೆಗೆ ಸ್ವಲ್ಪ ವಿರಾಮ ಸಿಗ್ತು.

ಪುನಃ ಚರ್ಚೆ ಶುರುವಾಯ್ತು,

"ಬಾಳೇಕಾಯಿ ಬಜೇಲಿ ಏನೋ ಒಂದು ವಿಚಿತ್ರ ಶಕ್ತಿ ಇರ್ಬೇಕ್ರಿ ಅದಕ್ಕೇ ನಮ್ಮ ಸ್ನೇಹಿತರಿಗೆ ಅದನ್ನ ತಿಂದೂ ತಿಂದೂ ಇನ್‌ಸ್ಟೀನ್ ಥೀರೀನ ವ್ಯಾಖ್ಯಾನ ಮಾಡೋ ಅಷ್ಟು ಬುದ್ಧಿ ಬೆಳ್ದಿದೆ"—ಅಂದ್ರು ಓಂಪುಡಿ.

ಓಂಪುಡಿ ಮತ್ತು ಬಾಳೇಕಾಯಿ ಬಜೆ ಮಧ್ಯೆ—ಚರಣ್ ಸಿಂಗ್ ರಾಜನಾರಾಯಣ್ ನಡುವೆ ಇದ್ದಷ್ಟೇ ಸ್ನೇಹ. ಓಂಪುಡಿ ಮಾಡಿದ ಟೀಕೇನ ಕೂಟವು ಅಂಗೀಕರಿಸಿತು;

ಬಾಳೇಕಾಯಿ ಬಜೆ ಕೆರಳಿದರು.

"ಹಾಗಾದ್ರೆ ನೀವು ಹೇಳಿ ರಿಲೇಟಿವಿಟಿ ಅಂದ್ರೆ ಅದೇನು ಸುಡುಗಾಡೂಂತ! ಓಂಪುಡಿ ಮುಕ್ಕಿ ನಿಮ್ಮ ಬ್ರೇನು ಹ್ಯಾಂಗೆ ಬೆಳ್ದಿದೆ ನೋಡೇ ಬಿಡ್ತೇನೆ" ಅಂದರು.

ಓಂಪುಡಿ ಮುಗುಳ್ನಕ್ಕರು.

"ನೋಡೇಬಿಡ್ರಿ. ರಿಲೇಟಿವಿಟಿ, ಕ್ವಾಂಟಮ್ ಥಿಯರಿ. ಸಾಪೇಕ್ಷತಾ ಸಿದ್ಧಾಂತ— ಇವೆಲ್ಲಾ ಏನೂಂತ ಆಡೇಸನ ಹಟ್ಟಿ ಥೂಕ್ರಪ್ಪನು ಕೂಡಾ ಹೇಳಿಬಿಡ್ತಾನೆ—ಈ ಕಾಲ್ದಲ್ಲಿ. ಎಲ್.ಕೆ.ಜೀಗೆ ಕೂಡ ಆ ಪಾಠ ಇದೆ. ಅದೇನಿಲ್ಲ ನೋಡಿ—ಯಾರೇ ಆಗ್ಲಿ —ಅಂದ್ರೆ ಈ ವಿರಾಟಭವನದಲ್ಲಿ ಕೂತು ಬಾಳೇಕಾಯಿ ಬಜಿ ಮುಕ್ಕೋರು ಕೂಡ ಈ ವಿರಾಟ ಭವನದ ಅಡಿಗೇ ಮನೇಲಿರೋ ಕಾದ ಕಾವ್ಲೀ ಮೇಲೆ ಒಂದು ನಿಮಿಷ ಕೂತ್ರೂ ಒಂದು ಘಂಟೆ ಕಾಲ ಆದ್ಹಾಂಗೆ ಆಗುತ್ತೆ. ಅದೇ ನೋಡಿ—ಒಳ್ಳೆ ಬೆಳ್ದಿಂಗಳು ರಾತ್ರೀಲಿ ತಾಜಮಹಲ್ ತೋಟದಲ್ಲಿ ಸಿಲ್ಕ್‌ಸ್ಮಿತಾ ಜೊತೇಲಿ ಲಲ್ಲೆ ಹೊಡೀತಾ ಇದ್ರೆ ಒಂದು ಘಂಟೆ ಅನ್ನೋದು ಒಂದು ನಿಮಿಷದ ಹಾಗೆ ಕಳೆದು ಹೋಗುತ್ತೆ. ಇದಕ್ಕೇ ನೋಡಿ ರಿಲೇಟಿವಿಟಿ—ಅಂತ ಹೇಳೋದು. ನನ್ನ ಹೆಂಡ್ತೀ ಕಡೇ ತಮ್ಮ ಮುರಾರಿ—ಯುವರಾಜಾ ಕಾಲೇಜಿನಲ್ಲಿ ಅಟೆಂಡ್ರು—ಅದೂ ಕೆಮಿಸ್ಟ್ರಿ ಲ್ಯಾಬೊರೇಟರೀಲಿ. ಅವನೇ ಹೇಳ್ದ ಈ ಮಾತನ್ನ. ಬೇಕಾರೆ ಕಾಗದಾ ಹಾಕಿ ಅವನ್ನೇ ಇಲ್ಲಿಗೆ ಕರಿಸ್ಲೇನು ? "

ಓಂಪುಡಿಯ ಸವಾಲಿಗೆ ಯಾರೂ ಉತ್ತರ ಕೊಡಲಿಲ್ಲ. ಆದರೆ ಮುದ್ದೂರು ವಡೆಗೆ ಸಮಾಧಾನವಾದ ಹಾಗಿರಲಿಲ್ಲ.

"ಇನ್ಸ್‌ಟೇನು ನಮ್ಮ ವಿರಾಟ ಭವನಕ್ಕೆ ಬಂದು ಕಾದ ಕಾವಲೀ ಮೇಲೆ ಕೂತು ಆಮೇಲೆ ಬೆಳ್ದಿಂಗಳ ರಾತ್ರೀಲಿ ಸಿಲ್ಕ್ ಸ್ಮಿತಾ ಜೊತೆ ತಾಜಮಹಲ್‌ನಲ್ಲಿ ಚಕ್ಕಂದ ಹೊಡೆದು ಆಮೇಲೆ ರಿಲೇಟಿವಿಟೀ ಬರೆದ ಅಂತ ನಂಬೋದೇ ಕಷ್ಟ" ಅಂದರು.

ಬಾಳೇಕಾಯಿ ಬಜೆ ಗೆದ್ದವರಂತೆ ಚಪ್ಪಾಳೆ ತಟ್ಟಿದರು.

ನಮ್ಮ ವಿರಾಟ ಭವನದ ಇತಿಹಾಸದಲ್ಲಿ ನಮ್ಮ ಕೂಟದ ಯಾವ ಸಮಸ್ಯೆಯೂ ಇಷ್ಟು ವಿಚಿತ್ರವಾಗಿ ಕಂಡಿರಲಿಲ್ಲ. ನಮ್ಮ ಮುಂದೆ ಹಠಾತ್ತನೆ ಮೌಂಟ್ ಎವರೆಸ್ಟ್ ಬಂದು ನಿಂತಹಾಗಿತ್ತು.

"ನಮ್ಮ ಸುಧೀಂದ್ರನ್ನ ಕೇಳಿದರೆ ಇವತ್ತಿನ ಸಮಸ್ಯೆಗೆ ಉತ್ತರ ಹೇಳಿಯಾನು"

ಮಲ್ಹಾರಿ ರಾಯರ ಧ್ವನಿ! ಕೂಟದಲ್ಲಿ ಅಣುಸ್ಫೋಟ!

ಮೊದಲ ಬಾರಿಗೆ ಅಂದಿನ ಕೂಟದಲ್ಲಿ ಮಲ್ಹಾರಿರಾಯರ ಧ್ವನಿ ಕೇಳಿಸಿತು. ಕೂಟದ ಸದಸ್ಯರು—ಭೂಮಿಗಿಳಿದೆವು. ಅಪರೂಪಕ್ಕೆ ಅಂದು ಯಾರ ಗಮನವೂ ಅವರ ಕಡೆ ಹೋಗಿರಲಿಲ್ಲ. ನಾವೆಲ್ಲ ಒಂದು ರೀತಿಯ ನಾಚಿಕೆಯಿಂದ ಮೌನ ತಾಳಿದೆವು. ಆದರೆ ಮಲ್ಹಾರಿರಾಯರು ಇಂಥ ಸಣ್ಣ ವಿಷಯಗಳಿಗೆಲ್ಲಾ ಬೇಜಾರು ಪಡುವವರಲ್ಲ. ಅವರದು ದೊಡ್ಡ ಮನಸ್ಸು.

"ಸುಧೀಂದ್ರ ನನ್ನಾಕೆಯ ದೊಡ್ಡಪ್ಪನ ಭಾವಮೈದುನನ ಮಗಳ ಬಲಮಗ, ಅಂದರೆ ಸರ್ವೋತ್ತಮರಾಯರ ಮೊದಲ ಹೆಂಡ್ತೀ ಮಗ, ಬಾಂಬೇಲೇ ವಾಸ. ಕಳೆದ ವರ್ಷ ಸುಧೀಂದ್ರನಿಗೆ ಕೊಪ್ರೀಕಟ್ಟೇ ಮನೆತನದ ಹೆಣ್ಣೊಂದಿಗೆ ಮದುವೆ ಯಾಯ್ತು ಅಂದರು.

ಮಲ್ಹಾರಿರಾಯರು ಎಂದೂ ಅಸಂಬದ್ಧ ಮಾತಾಡುವವರಲ್ಲ. ಅವರ ಮಾತಿಗೂ ಇನ್‌ಸ್ಟೀನ್ ಥೀರಿಗೂ ಏನಾದ್ರೂ ಸಂಬಂಧ ಇರಲೇಬೇಕೆಂದು ನಮ್ಮ ಕೂಟದವರಿಗೆಲ್ಲಾ ಮನದಟ್ಟಾಯ್ತು.

"ಅಂದರೆ ಸುಧೀಂದ್ರನಿಗೆ ರಿಲೆಟಿವಿಟಿ ಚೆನ್ನಾಗಿ ಗೊತ್ತು ಅನ್ನಿ" ಅಂದರು ಓಂಪ್ರುಡಿ.

"ಸುಧೀಂದ್ರನಿಗೇ ಅಲ್ಲ, ಅವನ ಭಾವ ನೆಂಟ–ಅಂದರೆ ಸುಧೀಂದ್ರನ ಹೆಂಡತಿಯ ಅಣ್ಣ ಓಂಪ್ರಕಾಶ್‌ಗೆ ಅದರ ಅನುಭವವಾಯ್ತು ಅಂದರು ರಾಯರು.

"ರಿಲೇಟಿವಿಟಿ ಅಂದ್ರೆ ನಿಜವಾಗಿ ಏನು ರಾಯರೆ? —ಅಂತ ಚೌ ಚೌ ಕೇಳಿದರು.

"ರಿಲೇಟಿವಿಟಿನ ಸರಿಯಾಗಿ ಅರ್ಥ ಮಾಡಿಕೊಂಡ್ರೆ—ಅದರಲ್ಲೇನಿಲ್ಲ—ಮಣ್ಣು ಆರಮ್‌ಸ್ಟ್ರಾಂಗ್ ಕಷ್ಟಪಟ್ಟು ಚಂದ್ರನ ಮೇಲೆ ಹೋಗಿ ಮಣ್ಣು ಕಂಡ ಹಾಗೇನೇ. ಒಂದು ವಸ್ತುವಿಗೆ ಅದರ ಉದ್ದ, ಅಗಲ ಮತ್ತು ಗಾತ್ರ ಬಿಟ್ಟು ನಾಲ್ಕನೇ ಅಳತೆಯೂ ಇರುತ್ತೆ, —ಅದೇ ನೋಡಿ ಫೋರ್ತ್ ಡೈಮನ್‌ಷನ್—ಮೂವ್‌ಮೆಂಟ್ ಚಲನೆ....

"ರಾಯರೇ–" ಅಂತ ಮಧ್ಯೆ ಬಾಯಿ ಹಾಕಿದರು ಬಾಳೇಕಾಯಿ ಬಜೆ.

ನಮಗೆಲ್ಲರಿಗೂ ಇನ್‌ಸ್ಟೀನನೇ ಬಂದು ಪಾಠ ಹೇಳುತ್ತಿದ್ದಾನೆಂಬ ಭ್ರಮೆಯಾಗಿತ್ತು. ಅದನ್ನ ಬಾ.ಬ. ಪೂರ್ತಿ ಹಾಳು ಮಾಡಿಬಿಟ್ಟರು.

"ಏನು ?" ಅಂದರು ರಾಯರು.

"ಕ್ಷಮಿಸಿ. ಮಸಲಾ–ನಾನ್ಹೇಳ್ತೀನೆ ಮಸಲಾ ಒಂದೇ ಆಕಾರ ಅಳತೆಗಳ ಬಾಳೇಕಾಯಿ ಚೂರುಗಳನ್ನ ಒಂದೊಂದೇ ಮುಷ್ಟಿ ಕಡೇ ಹಿಟ್ಟಿನ ರಾಡಿಯಲ್ಲಿ ಅದ್ದಿ ಒಂದೇ ಎತ್ತರದಿಂದ ಒಂದು ಬಾಂಡ್ಲಿಯಲ್ಲಿ ಕುದಿಯುತ್ತಿರುವ ಎಣ್ಣೆಯಲ್ಲಿ ಕರಿದು ಒಂದೇ ಬಾರಿಗೆ ಎರಡನ್ನೂ ಹೊರ ತೆಗೆದರೂ ಎರಡು ಬೇರೆ ಬೇರೆ ತರಾ ಬಜೆಗಳು ಬರುತ್ವಲ್ಲಾ-ಅದರಲ್ಲಿ ಇನ್‌ಸ್ಟೀನ್‌ಥೀರಿ ಇಬರ್ೋದೆ ?" ಅಂತ ಕೇಳಿ ಇನ್‌ಸ್ಟೀನ್ ಹತ್ರ ಸಿ.ವಿ. ರಾಮನ್ ಕ್ವಶ್ಚನ್ ಕೇಳಿದ ಗತ್ತಿನಿಂದ ನಮ್ಮ ಕಡೆ ನೋಡಿದರು.

ಓಂಪುಡಿ ಎದ್ದು ಹೊರಟು ಹೋದರು. ನಮಗೆಲ್ಲಾ ಸ್ವಲ್ಪ ಸಮಾಧಾನ ವಾಯ್ತು.

"ಇನ್‌ಸ್ಟೀನನಿಗೆ ಬಾಳೇಕಾಯಿ ಬಜೆ ಸಂಪರ್ಕವಿತ್ತೋ ಇಲ್ಲೋ ಗೊತ್ತಿಲ್ಲ- ಆತ ಅದರ ವಿಚಾರ ಬರೆದಿಟ್ಟಿಲ್ಲ. ಆದರೆ ನಮ್ಮ ಓಂಪ್ರಕಾಶ್‌ಗೆ ಆದ ಅನುಭವ ನಿಮಗೆ ಹೇಳಿದರೆ ರಿಲೆಟಿವಿಟಿ ಅಂದ್ರೆ ಏನು ?—ಅದರ ಮಹತ್ವವೇನು ?– ಅಂತ ನಿಮಗೆ ತಿಳಿಯಬಹುದು"—ಅಂತ ಹೇಳಿ ರಾಯರು ಬಾಳೇ ಕಾಯಿ ಬಜೆ ಅರ್ಥಹೀನ ಮಾತುಗಳಿಗೆ ಇತಿಶ್ರೀ ಹಾಡಿದರು.

ಓಂಪುಡಿ ಒಳಕ್ಕೆ ಬಂದು ಕೂಟದಲ್ಲಿ ಸೇರಿಕೊಂಡರು.

ಸುಧೀಂದ್ರನ ಹೆಂಡತಿಯ ಅಣ್ಣ ಓಮ್‌ಪ್ರಕಾಶ್ (ಮಲ್ಲಾರಿರಾಯರು ತಮ್ಮ ಮಾತನ್ನು ಮುಂದುವರಿಸಿದರು)—ಬಾಂಬೇಲಿ ಒಂದು ಕಂಪ್ಯೂಟರ್ ಕಂಪೆನೀಲಿ ಟೈಪಿಸ್ಟು. ಬಾಂಬೇಲಿ ನೀವು ಅಟಾಮಿಕ್ ಸೆಂಟರ್‌ಗೆ ಹೋಗಬೇಕಾದ್ರೆ ಸುಧೀಂದ್ರನ ಕಂಪೆನೀ ಮುಂದೇನೇ ಹೋಗ್ಬೇಕು. ಗೋರಖ್‌ನಾಥ್-ಅನ್ನೋನೂ ಅದೇ ಕಂಪ್ಯೂಟರ್ ಕಂಪ್ನೀಲಿ ಸ್ಟೆನೋ. ನಮ್ಮ ಓಂಪ್ರಕಾಶೂ ಗೋರಖ್‌ನಾಥ್‌ಗೂ ತುಂಬ ಅಚ್ಚು ಮೆಚ್ಚು. ಒಬ್ಬನ್ನ ಬಿಟ್ಟು ಇನ್ನೊಬ್ಬನಿರೊಲ್ಲ. ಇಬ್ಬರಿಗೂ ಭಯಂಕರ ಇಂಗ್ಲಿಷ್ ಸಿನಿಮಾ ಚಿತ್ರಗಳೆಂದರೆ ಪಂಚಪ್ರಾಣ. ಜಾಸ್, ಓಮೆನ್, ಸ್ಟಾರ್‌ವಾರ್ಸ್, ಸೂಪರ್‌ಮ್ಯಾನ್, ಎಕ್ಸಾರ್ಸಿಸ್ಟ್–ಇ.ಟಿ.–ಅಂಥಾ ಇಂಗ್ಲಿಷ್ ಚಿತ್ರಗಳನ್ನ ಇಬ್ರೂ ಒಟ್ಟಿಗೆ ಸೇರಿ ಎರಡು ಷೋಗಳನ್ನು ಒಟ್ಟೊಟ್ಟಿಗೇ ಕೂತು ನೋಡಿದ ಭೂಪರು. ಮೊದಲೇ ಓಂಪ್ರಕಾಶ್‌ಗೆ ನಾನು ಹೇಳಿದ ಹಾಗೆ ಕಂಪ್ಯೂಟರ್ ಕಂಪ್ನೀಲಿ ಕೆಲ್ಸ. ಜೊತೆಗೆ ಅಟಾಮಿಕ್ ಸೆಂಟರ್ ಫಾಳಿ. ಜೊತೆಗೆ–ಈ ಇಂಗ್ಲಿಷ್ ಸಿನಿಮಾ ಸಹ ವಾಸ. ಇವೆಲ್ಲದರ ಪರಿಣಾಮದಿಂದ ಅವನಿಗೂ ಗೋರಖ್‌ನಾಥ್‌ಗೂ ರಿಲೇಟಿವಿಟಿ,

ಪೋರ್ತ್‌ಡೈವ್.ನ್‌ಷನ್-ಅಂದ್ರೆ ಕರತಲಾಮಲಕ. ಅವರಿಬ್ಬರಿಗೂ ಆಸ್ಪದವಿದ್ದು ಅವಕಾಶ ಕಲ್ಪಿಸಿದ್ರೆ, ಆಟಮ್‌ಬಾಂಬ್ ಕೂಡ ತಯಾರು ಮಾಡಿಬಿಡ್ತಾರೆ.!

ಹೋದ ವರ್ಷ ದಿಲ್ಲೀಲಿ ನಡೆದ ಒಂಭತ್ತನೆ ಏಷಿಯಾಡ್ ಪಂದ್ಯಗಳಿಗೆ ಹೋಗಿ ಹಾಜರ್ ಹಾಕ್ಬೇಕೂಂತ ಓಂಪ್ರಕಾಶ್ ಗೋರಖ್‌ನಾಥ್-ಇಬ್ರಿಗೂ ವಿಪರೀತ ಆಸೆ ಹುಟ್ಟಿತು. ದಿಲ್ಲೀಲಿ ತಮ್ಮ ಕಂಪ್ನೀ ಆಫೀಸ್ ಮೂಲ್ಕ ಮುನ್ನೂರು ಮುನ್ನೂರು ರೂಪಾಯಿತೆತ್ತು ಟಿಕೀಟುಗಳನ್ನೂ ಪಡಕೊಂಡಾಯ್ತು. ಆಗ್ಲೇ ಗೋರಖ್‌ನಾಥ್‌ಗೆ ಒಂದು ಯೋಚನೆ ಹುಟ್ಟಿಕ್ಕೊಂಡಿದ್ದು–ಏಷಿಯಾಡ್‌ಗೆ ಯಾವ ಡ್ರೆಸ್ ಧರಿಸಿ ಹೋಗ ಬೇಕೂಂತ! ಸಫಾರಿ ಸೂಟ್! ಸಫಾರಿ ಸೂಟ್ ಧರಿಸೋದು-ತಾನೂ ಓಂಪ್ರಕಾಶ್ ಇಬ್ರೂ ಅಂತ-ಗೋರಖ್‌ನಾಥ್ ನಿರ್ಧರಿಸಿದ. ಓಂಪ್ರಕಾಶ್ ಓ.ಕೆ. ಮಾಡಿದ. ಅಷ್ಟೇ ಅಲ್ಲ–ಇಬ್ರೂ ಒಂದೇ ತರಹ-ಅಂದ್ರೆ ಬಿಲ್‌ಕುಲ್ ಒಂದೇ ತರಹ ಸಫಾರಿ ಸೂಟ್ ಹೊಲಿಸ್ಕೋಬೇಕು ಅಂತ ಓಂಪ್ರಕಾಶ್ ಹೇಳಿದ. ಗೋರಖ್‌ನಾಥ್ ಓ.ಕೆ. ಮಾಡಿದ.

ಈಗ ಈ ಪ್ರಸಂಗದ ಅತೀ ಮುಖ್ಯ ಪಾಯಿಂಟಿಗೆ ಬರ್ತೇನೆ ಕೇಳಿ-ಓಂಪ್ರಕಾಶ್ ಹೆಚ್ಚೂ ಕಮ್ಮಿ ನಮ್ಮ ಗುಂಡಪ್ಪ ವಿಶ್ವನಾಥ್ ಸೈಜು. ಗೋರಖ್‌ನಾಥ್–ಅವನ ಹೆಸರಿಗೆ ತಕ್ಕ ಹಾಗೆ ಅಮಿತಾಬ್‌ಬಚನ್ ಸೈಜುನೋನು. ಲಂಬು ಮನುಷ್ಯ. ಓಂಪ್ರಕಾಶ್-ಗೋರಖ್‌ನಾಥ್ ಇಬ್ರೂ ಬಾಂಬೇಲಿ ವಿಮಲ್ ಷೋರೂಮ್‌ಗೆ ಹೋಗಿ-ಅಲ್ಲಿ ಒಂದೇ ಕಲರ್ ಒಂದೇ ಪ್ಯಾಟ್ರನ್ ಒಂದೇ ಮೆಟೀರಿಯಲ್‌ನ ಒಂದೇ ರೋಲಿಂದ ತಮ್ಮ ತಮ್ಮ ಸೈಜುಗಳಿಗೆ ಸರಿ ಹೋಗುವಂತೆ ಸಫಾರಿ-ಸೂಟ್‌ಗಳಿಗೆ ಸಾಕಾಗುವಷ್ಟು ಬಟ್ಟೆ ಖರೀದಿ ಮಾಡಿದರು. ಬಾಂಬೇಲಿ ಹೆಸರಾಂತ ದರ್ಜಿ-ಜಮ್‌ಷೆಡ್ಜಿ ಪೋಚ್‌ಕನ್ ದಾರೂವಾಲಾ ಹತ್ರ ತಮ್ಮ ಅಳತೆಕೊಟ್ಟು ಸಫಾರಿ ಸೂಟ್‌ಧರಿಸಿ ಜಂ.ಪೋ.ದಾ. ಕಂಪೆನಿಯ ಬೃಹತ್ ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬ ನೋಡಿಕೊಂಡ್ರು. ತಮ್ಮ ತಮ್ಮ ಪ್ರತಿಬಿಂಬ ಅವರವರಿಗೇ ಗುರುತು ಸಿಗಲಿಲ್ಲವಂತೆ. ತಾವು ತಾವೇ-ಹಲೋ ಹಲೋ-ಅಂದುಕೊಂಡರಂತೆ. ಇದೇ ಪೋಚಕನ್ ದಾರೂವಾಲಾನೇ-ಅಮಿತಾಬ್, ದಿಲೀಪ್, ಅಶೋಕ್, ದೇವ್, ರಾಜ್-ಇವರಿಗೆಲ್ಲಾ ಸೂಟ್ ಹೊಲಿಯೋನೂ ಅಂದ್ರೆ-ಆ ದರ್ಜಿಯ ಮಟ್ಟ ಏನೂಂತ ನಿಮಗೆ ಅರ್ಥವಾಗುತ್ತೆ.

ಓಮ್‌ಪ್ರಕಾಶ್ ಗೋರಖ್‌ನಾಥ್ ತಮ್ಮ ತಮ್ಮ ಸಫಾರಿ ಸೂಟ್‌ಗಳನ್ನ ಸರಿಯಾಗಿ ಮಡಿಸಿಸಿ ಪ್ರೆಸ್ ಮಾಡಿಸಿ ಗಿಲ್ಟ್ ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಿಸಿ ತಮ್ಮ ರೂಮಿಗೆ ತಂದ್ರು. ಏಷಿಯಾಡ್‌ಗೆ-ದೆಲ್ಲೀಗೆ ಅದೇ ಗಿಲ್ಟ್ ಬಾಕ್ಸ್‌ಗಳಲ್ಲೇ

ತಕೊಂಡು ಹೋದ್ರು. ದಿಲ್ಲೀಲಿ ತಾವು ಇಳ್ಕೊಂಡಿದ್ದ ಹೋಟೆಲಿನ ಏರ್‌ಕಂಡೀಷನ್ ರೂಮಿನಲ್ಲಿ ತಮ್ಮ ತಮ್ಮ ಬಾಕ್ಸ್‌ನ ತಮ್ಮ ತಮ್ಮ ಟೇಬಲ್ ಮೇಲೆ ಇಟ್ಟು ಕೊಂಡರು. ಅಂದ್ರೆ ಓಂಪ್ರಕಾಶ್ ಗಿಲ್ಟ್ ಬಾಕ್ಸ್ ಓಂಪ್ರಕಾಶ್ ಟೇಬಲ್ ಮೇಲೆ ಗೋರಖ್‌ನಾಥ್ ಗಿಲ್ಟ್ ಬಾಕ್ಸ್ ಗೋರಖ್‌ನಾಥ್ ಟೇಬಲ್ ಮೇಲೆ, ಈ ವಿಷಯ ಈ ಪ್ರಸಂಗಕ್ಕೆ ಅತೀ ಮುಖ್ಯವಾದ ಅಂಶಗಳು-ಮರೀಬೇಡಿ.

ತಮ್ಮ ಸಫಾರಿ ಸೂಟುಗಳನ್ನ ಏಷಿಯಾಡ್‌ನ ಯಾವ ಯಾವ ದಿನಗಳಲ್ಲಿ ಧರಿಸಬೇಕೂಂತ ಓಂಪ್ರಕಾಶ್–ಗೋರಖ್‌ನಾಥ್ ಮೊದಲೇ ನಿರ್ಧರಿಸಿದ್ದರು. ಫುಟ್‌ಬಾಲ್, ಹಾಕಿ ಪಂದ್ಯಗಳಲ್ಲಿ ತುಂಬಾ ಧೂಳುತ್ತೆ ಅಂತ–ಆ ದಿನಗಳು ಸಫಾರಿ ಸೂಟಿಗೆ ಲಾಯಕ್ಕಿಲ್ಲ ಅಂತ ಆದವು. ಗೋರಖ್‌ನಾಥ್ ಅಭಿಪ್ರಾಯದಲ್ಲಿ ಪುರುಷರ ಕ್ರೀಡೆಗಳೆಲ್ಲಾ ಸಫಾರೀ ಸೂಟಿಗೆ ಔಟ್-ಆಫ್-ಬೌಂಡ್ಸ್-ಇದೊಂದು ಮಿಲಿಟ್ರಿ ಕ್ರಮ-ಔಟ್ ಆಫ್-ಬೌಂಡ್ಸ್ ಅಂದ್ರೆ ಯಾರೂ ಹತ್ರ ಸುಳೀಬಾರ್ದು. ಸುಳಿದರೆ–ಖಬರ್ದಾರ್ ! ಷೂಟ್-ಎಟ್-ಸೈಟ್ ! ಇದೇ ರೀತಿ ಓಂಪ್ರಕಾಶ್ ಫೀಲ್ಡ್ ಇವೆಂಟ್ಸ್‌ನೆಲ್ಲಾ–ಅಂದ್ರೆ ಓಡೋದು ಎಗರೋದು, ಹಾರೋದು-ಈ ಪಂದ್ಯಗಳ ನೆಲ್ಲಾ ಸಫಾರಿಸೂಟಿಗೆ ವಜಾಮಾಡಿದ ಹಾಗಾಗಿ ನಮ್ಮ ಹುಡುಗರು ತಮ್ಮ ಸಫಾರಿ ಸೂಟ್ ಧರಿಸಿಕೊಂಡು ನೋಡೋಕೆ ಲಾಯಕ್ಕಾದ ಪಂದ್ಯಗಳೂ ಅಂದ್ರೆ—ಲೇಡೀಸ್ ಜಿಮ್ನಾಸ್ಟಿಕ್ಸ್ ಮತ್ತು ಲೇಡೀಸ್ ಸ್ವಿಮಿಂಗ್ ಮಾತ್ರ.

ಏಷಿಯಾಡ್‌ನಗರದ ಇಂದ್ರಪ್ರಸ್ತಾ ಸ್ಟೇಡಿಯಂ ಜನರಿಂದ ಕಿಕ್ಕರಿದು ತುಂಬಿ ತುಳುಕುತ್ತಿದೆ. ರಾಜೀವ್, ಸೋನಿಯಾ, ಪ್ರಿಯಾಂಕ, ರಾಹುಲ್, ಅಮಿತಾಬ್, ಜಯ, ಅಭಿಷೇಕ್-ಎಲ್ರೂ ಜಮಾಯ್ಸಿ ಬಿಟ್ಟಿದ್ದಾರೆ ಏಕೆ ? ಅಲ್ಲೀ ಆದಿನ ಲೇಡೀಸ್ ಜಿಮ್ನಾಸ್ಟಿಕ್ಸ್, ಚೀನಾ ದೇಶದ ಊನ್‌ಜಿಯಾನಿ ಜಿಯಾನ್‌ವೆನ್ ಚಾಂಗ್ಚಿಸಿರ್ ಮೋಗಳಂಥಾ ಕ್ರೀಡಾಮಣಿಗಳು ಅಲ್ಲಿ ಆ ದಿನ ತಮ್ಮ ಕ್ರೀಡಾ ಕೌಶಲ್ಯ ತೋರಿಸ್ತಾರೆ. ಇಂತಹ ಒಂದು ಸಭಾಂಗಣಕ್ಕೆ-ಅಥವಾ ಕ್ರೀಡಾಂಗಣಕ್ಕೆ–ಓಂಪ್ರಕಾಶ್ ಗೋರಖ್‌ನಾಥ್ ಇಬ್ರೂ ತಮ್ಮ ಸಫಾರಿಸೂಟ್‌ಗಳನ್ನ ಧರಿಸಿ ಆಗಮಿಸಿದರು. ಅವರಿಬ್ಬರೂ ತಮ್ಮ ಹೋಟೆಲಿನ ಏರ್‌ಕಂಡೀಷನ್‌ಡ್ ರೂಮಿನಿಂದ ಹೊರಟು ಏಷಿಯಾಡ್ ಕಡೆ ನಡೆಯುವಾಗ ಮತ್ತು ಬಸ್ಸಿನಲ್ಲಿ ಕೂತು ಬರುವಾಗ ಅವರಿಗೆ ಸಿಕ್ಕ ಜನರೆಲ್ಲ ಅವರ ಸಫಾರಿ ಸೂಟುಗಳನ್ನು ನೋಡಿ ಬೆಬ್ಬರಗಾಗಿದ್ದು ಇವರ ಗಮನಕ್ಕೆ ಬಂದಿತ್ತು, ಇಬ್ರೂ ಮನಸ್ಸಿನಲ್ಲೇ ಹಿಗ್ಗಿದ್ದರು, ಇಂದ್ರ ಪ್ರಸ್ತಾ ಸ್ಟೇಡಿಯಂನಲ್ಲಿ ಅವರಿಬ್ಬರೂ ತಮಗಾಗಿ ಕಾದಿರಿಸಿದ್ದ ಸೀಟುಗಳಲ್ಲಿ ಕೂತರು. ಚೈನಾ ದೇಶದ ಅಪ್ಸರೆ ಊನ್‌ಜಿಯಾನಿಯ ಬ್ಯಾಲೆನ್ಸಿಂಗ್‌ಬೀಮ್ ಮತ್ತು ಫ್ಲೋರ್

ಎಕ್ಸರ್‌ಸೈಜಂಗಳಲ್ಲಿ ತಮ್ಮ ಮೈಮರೆತರು. ತಮ್ಮ ಸಫಾರಿಸೂಟುಗಳು ಸಾರ್ಥಕತೆ ಪಡೆದವೆಂದು ಸಂತೋಷಪಟ್ಟರು.

ಇದ್ದಕ್ಕಿದ್ದ ಹಾಗೆ ಓಂಪ್ರಕಾಶ್‌ಗೆ ಕರ್ಚಿಫ್ ಬೇಕಾಯ್ತು. ತನ್ನ ಸಫಾರಿ ಪ್ಯಾಂಟಿನ ಜೇಬಿನಲ್ಲಿಟ್ಟಿದ್ದ ಕರ್ಚಿಫ್ ತೆಗೆಯಲು ಕೈ ಇಳಿಬಿಡಬೇಕೆಂದಾಗ ಅವನ ಕೈಯೇ ಮಾಯವಾಗಿತ್ತು! ಕೈ ಇರಬೇಕಾಗಿದ್ದ ಜಾಗದಲ್ಲಿ ಅವನ ಸಫಾರಿ ಕೋಟಿನ ಫುಲ್ ಆರಮ್ ಜೋಲಾಡುತ್ತಿತ್ತು. ನಿಮ್ಮಲ್ಲಿ ಯಾರಿಗಾದರೂ ಆ ರೀತಿ ಆಗಿದ್ದಿದ್ದರೆ ತಕ್ಷಣ–ಥಂಪ್! ಹಾರ್ಟ್‌ಫೇಲಾಗ್ಬಿಟ್ಟಿರೋದು. ಆದ್ರೆ ಓಂಪ್ರಕಾಶ್ ಬಾಂಬೇ ಹುಡುಗ – ತನ್ನ ಇನ್ನೊಂದು ಕೈ ನೋಡಿಕೊಂಡು–ಅದೂಮಾಯ! ತಕ್ಷಣ ಪಕ್ಕದಲ್ಲಿದ್ದ ಗೋರಖ್‌ನಾಥ್‌ಕಡೆ ನೋಡಿದ. ಆಗ ನಿಜವಾಗಿ ಗಾಬರಿ ಯಾದ. ಗೋರಖ್‌ನಾಥ್‌ನ ಸಫಾರಿ ಕೋಟಿನ ತೋಳುಗಳು ಅವನ ಕಂಕುಳ ಕೆಳಗೆ ಇಳಿದೇ ಇರ್ಲಿಲ್ಲ. ಸ್ನೇಹಿತನಗಾಬರಿ ಮುಖನೋಡಿ ಗೋರಖ್‌ನಾಥ್ ಎದ್ದು ನಿಂತ. ಅವನ ಸಫಾರಿ ಪ್ಯಾಂಟು ಅವನ ಮೊಣಕಾಲಿಗೆ ಮುಗಿದಿತ್ತು- ಓಂಪ್ರಕಾಶ್ ತನ್ನ ಕಾಲುಗಳನ್ನ ನೋಡಿಕೊಂಡ – ಕಾಲುಗಳೇ ಇರಲಿಲ್ಲ. ಇಷ್ಟರಲ್ಲಿ ಸುತ್ತು ಮುತ್ತ ಕೂತಿದ್ದ ಪ್ರೇಕ್ಷಕರೆಲ್ಲಾ ಇವರಿಬ್ಬರೂ ಎದ್ದು ನಿಂತಿರುವುದನ್ನು ನೋಡಿ– "ಗಲ್ದೀ ಬೈಟೋ! ಬೈಟೋ!" ಅಂತ ಕೂಗಿಕೊಂಡು ಗಲಾಟೆ ಮಾಡಿದರು. ಊನ್‌ಜಿಯಾನಿ ಬ್ಯಾಲೆನ್ಸಿಂಗ್ ಬೀಮ್ ಮೇಲಿದ್ದೋಳು ಹಾಗೇ ನಿಂತುಬಿಟ್ಟಳು. ಆ ಸಮಯದಲ್ಲಿ ಓಮ್ ಪ್ರಕಾಶ್ – ಗೋರಖ್‌ನಾಥ್‌ಗೆ ಜಿಮ್ನಾಸ್ಟಿಕ್ಸ್ ಮೇಲಿನ ಮೋಹವೇ ಮಾಯವಾಯ್ತು, ಗಪ್‌ಚಿಪ್ಪಾಗಿ ಇಬ್ಬರೂ ಸ್ಟೇಡಿಯಂನಿಂದ ಹೊರಗೆ ಬಂದರು.

"ನಿನ್ನ ಸಫಾರಿಸೂಟ್ ಬಕಾಸುರನಿಗೆ ಹೋಲಿಸಿದ ಹಾಗಿದೆ" —ಅಂದ ಗೋರಖ್‌ನಾಥ್,

"ನಿನ್ನ ·ಸಫಾರಿಸೂಟ್ ವಾಮನನಿಗೆ ಹೋಲಿಸಿದಹಾಗಿದೆ —ಅಂದ ಓಂಪ್ರಕಾಶ್.

ಇಬ್ಬರೂ ತಮ್ಮ ಏರ್ ಕಂಡೀಷನ್‌ಡ್ ರೂಮ್ ಸೇರಿಕೊಂಡರು. ತಮ್ಮ ಸಫಾರಿ ಸೂಟುಗಳನ್ನ ಬಿಚ್ಚಿ ಮಡಿಸಿ ಅದರದರ ಗಿಲ್ಟ್‌ಬಾಕ್ಸ್‌ನಲ್ಲಿಟ್ಟರು. ತಮ್ಮ ತಮ್ಮ ಮೇಜುಗಳ ಮೇಲೆ ಬೇಜಾರಿನಿಂದ ಇಟ್ಟರು. ಅಂದು ರಾತ್ರಿ ಅವರಿಬ್ಬರೂ ಊಟವನ್ನು ಸರಿಯಾಗಿ ಮಾಡಲಿಲ್ಲ. ನಿದ್ರೆಯನ್ನೂ ಸರಿಯಾಗಿ ಮಾಡಲಿಲ್ಲ.

ಮಾರುದಿನ ಏಷಿಯಾಡ್‌ನ ಟಲ್ಕಾಟೋರಾ ಅಖಾಡದಲ್ಲಿ ಸ್ವಿಮಿಂಗ್ ಮತ್ತು ಡೈವಿಂಗ್ ಪಂದ್ಯಗಳು—ಲೇಡೀಸ್ ಇವೆಂಟ್ಸ್. ಅವು ಆ ನಮ್ಮ ಸ್ನೇಹಿತರ ಸಫಾರಿ ಸೂಟುಗಳ ಪಟ್ಟಿಯಲ್ಲಿದ್ದವು – ವಿತಿನ್ ಬೌಂಡ್ಸ್ ! ಇಬ್ಬರೂ ಅರ್ಥಗರ್ಭಿತ ರಾಗಿ ಒಬ್ಬರ ಮುಖ ಒಬ್ಬರು ನೋಡಿದರು ಮುಗಳ್ನಕ್ಕರು.

"ಇಲ್ಲೇ ಧರಿಸಿ ಮಿರರ್‌ನಲ್ಲಿ ನೋಡಿಕೊಂಡು ರೂಮಿಂದ ಹೊರಗೆ ಕಾಲಿಡೋಣ"—ಅಂದ ಓಂಪ್ರಕಾಶ್.

"ಅದ್ದೇ ನಾನೂ ಹೇಳೋಣಾಂತ ಇದ್ದೆ ಅಂದ ಗೋರಖ್‌ನಾಥ್.

ಇಬ್ಬರೂ ತಮ್ಮ ತಮ್ಮ ಸಫಾರಿ ಸೂಟ್ ಧರಿಸಿದರು. ತುಂಬ ಎಚ್ಚರಿಕೆ ಯಿಂದ ತಮ್ಮ ಆಕೃತಿಯನ್ನು ತಮ್ಮ ತಮ್ಮ ಡ್ರೆಸಿಂಗ್ ಮಿರರ್‌ನಲ್ಲಿ ನೋಡಿಕೊಂಡರು. ಒಬ್ಬೊಬ್ಬರೂ ತಮ್ಮ ತಮ್ಮ ಆಕೃತಿಗೆ "ಹಲೋ ! ಅಂದುಕೊಂಡರು.

ಇಬ್ಬರೂ ದಿಡೀರಂತ ತಿರುಗಿ ಮುಖಾಮುಖಿಯಾದರು.

"ಹಲ್ಲೋ ಅಮಿತಾಬ್ ! " ಅಂತ ಕೂಗಿದ ಓಂಪ್ರಕಾಶ್.

"ಹಲ್ಲೋ ಗವಾಸ್ಕರ್ ! " ಅಂತ ಕಿರ್ಚಿದ ಗೋರಖ್‌ನಾಥ್.

ರೂಮಿನ ಬಾಗಿಲು ತಟ್ಟಿದ ಶಬ್ದವಾಯ್ತು.

ಹೋಟೆಲ್ ಮ್ಯಾನೇಜರ್ ಆಗರ್‌ವಾಲ್ ಹೊಕ್ಕ. ಇಬ್ಬರು ಸ್ನೇಹಿತರನ್ನೂ ನೋಡಿದ.

"ವ್ಹಾ ! ಬಾಂಬೇ ಜಿಮ್‌ಷೆಟ್‌ಜಿ ಪೋಚ್‌ಕನ್ ದಾರೂವಾಲಾ ಹೊಲಿದ ಸಫಾರೀ ಸೂಟುಗಳನ್ನ ತಾನೇ ನೀವುಗಳು ಧರಿಸಿರೋದು ? ಈ ಸೂಟುಗಳ ಅಂದವೇ ಹೇಳುತ್ವೆ ! " ಅಂತ ಉದ್ಗಾರ ತೆಗೆದ.

"ಕರೆಕ್ಟ್ ಅಂದ ಗೋರಖ್‌ನಾಥ್.

ಆಗರ್‌ವಾಲ್ ಒಂದು ಟೆಲಿಗ್ರಾಂ ತಂದಿದ್ದ. ಓಂಪ್ರಕಾಶ್ ಹೆಸರಿಗೆ ಬಂದಿತ್ತು. ಅವನ ಕಂಪ್ಯೂಟರ್ ಕಂಪೆನಿ ಮ್ಯಾನೇಜಿಂಗ್ ಡೈರೆಕ್ಟರ್ ಮಾಣಿಕ್‌ಲಾಲ್ ಕಳ್ಸಿ ಕೊಟ್ಟಿದ್ದ. ಅವನ ಮಗಳು ಜೋತ್ಸ್ನಾ ದಿಲ್ಲಿಯಲ್ಲಿರುವುದಾಗಿಯೂ ಅವಳು ಏಷಿ

ಯಾಡ್‌ನ ಲೇಡೀಸ್ ಸ್ವಿಮಿಂಗ್ ಇವೆಂಟ್ಸ್‌ಗೆ ಬರುವುದಾಗಿಯೂ ಓಂಪ್ರಕಾಶ್ ಮಹನತ್ ಮಾಡಿ ಜ್ಯೋತ್ಸ್ನಾಗೆ ಊನ್‌ಜಿಯಾನಿ ಫೋಟೋ ಮತ್ತು ಆಟೋಗ್ರಾಫ್ ಕೊಡಿಸಬೇಕೆಂದೂ—ಟೆಲಿಗ್ರಾಂನಲ್ಲಿ ನಮೂದಿಸಿತ್ತು. ಓಂಪ್ರಕಾಶ್ ಎರಡು ಮೂರು ಬಾರಿ ಅಗರ್‌ವಾಲ್ ಮನೆಗೆ ಹೋಗಿದ್ದದ್ದರಿಂದ ಅವನಿಗೆ ಆ ಹುಡುಗಿಯ ಪರಿಚಯವಿತ್ತು. ಓಂಪ್ರಕಾಶ್‌ನ ಹೆಮ್ಮೆ ಇಮ್ಮಡಿಸಿತು.

ಅಂದು ಟಲ್ಕಾಟೋರಾ ಸ್ಟೇಡಿಯಂ ಪ್ರೇಕ್ಷಕರಿಂದ ತುಂಬಿ ಹೋಗಿತ್ತು ಹೆಣ್ಣು ಮಕ್ಕಳ ಸ್ವಿಮಿಂಗ್ ಮತ್ತು ಡೈವಿಂಗ್ ಪಂದ್ಯಗಳು. ಗೋಟೋಯುನಿಕೋ ಟೌಕಾಯಾಶೀ, ಮುಟ್ಸುಹಟೋ, ಕಿಯೋಶಿ ನೈಟೋ, ಕಿಮ್‌ಜಿನ್ ಹೋ, ಫಾನಿಯೋಮಾಂಗ್, ಗ್ವಾನ್ಫುಸುನೋಗಳಂತಹ ಕನ್ಯಾಮಣಿಗಳನ್ನು ನೋಡಲು ಜನ ಕಿಕ್ಕಿರಿದು ನೆರೆದಿದ್ದರು. ಓಂಪ್ರಕಾಶ್ ಮತ್ತು ಗೋರಖ್‌ನಾಥ್ ತಮ್ಮ ಸಫಾರಿ ಸೂಟ್ ಧರಿಸಿ ಸ್ಟೇಡಿಯಂ ಹೊಕ್ಕರು. ಜಪಾನ್, ಕೋರಿಯಾ, ಚೀನಾ ದೇಶಗಳ ಮತ್ಸ್ಯಕನ್ಯೆಯರ ಸ್ವಿಮಿಂಗ್ ಮತ್ತು ಡೈವಿಂಗ್ ಮನ ಮತ್ತು ನಯನ ಮೋಹಕವಾಗಿದ್ದುದಂತೆ, ಇಬ್ಬರು ಸ್ನೇಹಿತರೂ ತದೇಕಚಿತ್ತದಿಂದ ನೋಡಿ ಆನಂದಿಸಿದರು. ನಮ್ಮ ಶ್ರೀ ಕೃಷ್ಣ ಜಲಕ್ರೀಡೆ ನಿಜವಾಗಿ ಆಡಿದ್ದಿದ್ರೆ ಜಪಾನೀ ಹುಡುಗೀರ ಜೊತೆಗೇ ಆಡಿದ್ದಾನು—ಅಂತಾನಂತೆ ಗೋರಖ್‌ನಾಥ್! ಕ್ರೀಡೆಗಳ ಮಧ್ಯೆ, ಒಂದು ಬಾರಿ ಓಂಪ್ರಕಾಶ್ ತನ್ನ ಕಣ್ಣುಗಳನ್ನು ಇತರೇ ಪ್ರೇಕ್ಷಕರ ಕಡೆ ಹರಿಸಿದ. ಆಗ ಅವನು ಕಂಡಿದ್ದೇನು? ಎಲ್ಲರ ಕಣ್ಣುಗಳೂ ತಮ್ಮ ಮೇಲೆ! ಓಂ ಪ್ರಕಾಶ್ ಗೋರಖ್‌ನಾಥ್ ಮೇಲೆ! ಏಕೆ—ಅಂತ ತಿಳಿಯಲಿಲ್ಲ. ಕ್ರೀಡೆಗಳೆಲ್ಲಾ ಮುಗಿದ ಮೇಲೆ ಓಂಪ್ರಕಾಶ್ ಗೋರಖ್‌ನಾಥ್ ತಮ್ಮ ಸೀಟುಗಳನ್ನು ಬಿಟ್ಟು ಹೊರಗೆ ಬಂದರು. ಆ ಸಮಯದಲ್ಲಿ ಅಲ್ಲಿದ್ದ ಕನ್ಯಾಸ್ಪರ್ಧಿಗಳು ಕೂಡ ಇವರಿಬ್ಬರನ್ನು ಅವಾಕ್ಕಾಗಿ ನೋಡಿ ಮುಗುಳ್ನಕ್ಕು ತಲೆ ತಗ್ಗಿಸಿಕೊಂಡರಂತೆ!

ಸ್ಟೇಡಿಯಂ ಬಿಟ್ಟು ಹೊರಕ್ಕೆ ಹೊರಡುವ ಸಮಯವಾಯ್ತು. ಓಂಪ್ರಕಾಶ್ ಗೋರಖ್‌ನಾಥ್ ಇನ್ನೇನು ಸ್ಟೇಡಿಯಂ ದ್ವಾರದ ಕಡೆ ಕಾಲಿಡಬೇಕು........

"ಕ್ಷಮಿಸಿ—ನಾನು ಅಮಿತಾಬ್ ಬಚನ್....

—ಗಂಭೀರ ಧ್ವನಿ ಕೇಳಿಸಿತು.

ಇಬ್ಬರೂ ತಿರುಗಿದರು.

ಹೌದು—ಅಮಿತಾಬ್!

"ನಮಸ್ತೆ—ನಮಸ್ತೆ—ತುಂಬ ಸಂತೋಷ" ಅಂದರು.

"ನಮಸ್ತೆ—ನಮಸ್ತೆ—ಈ ನಿಮ್ಮ ಸಫಾರಿ ಸೂಟುಗಳನ್ನ ಎಲ್ಲಿ ಹೊಲಿಸಿದಿರಿ ಹೇಳಿ"—ಅಂತ ಅಮಿತಾಬ್ ಪ್ರಶ್ನಿಸಿದ.

"ಬಾಂಬೇಲಿ. ಅಂದ ಗೋರಖ್‌ನಾಥ್

ಓಂಪ್ರಕಾಶ್‌ಗೆ ಮಾತನಾಡಲು ನಾಲಿಗೆ ಸಿಕ್ಕಿಹಾಕಿಕೊಂಡಿತ್ತಂತೆ.

"ಜಮ್‌ಷೆಟ್ಜಿ ಪೋಚ್‌ಕನ್ ದಾರೂವಾಲಾ ತಾನೇ ಈ ಸಫಾರಿ ಸೂಟುಗಳನ್ನ ಹೊಲಿದಿದ್ದು ?" ಅಮಿತಾಬ್‌ನ ಮರು ಪ್ರಶ್ನೆ.

"ಆಫ್‌ಕೋರ್ಸ್ ! ಏಕೆ ?" ಓಂಪ್ರಕಾಶ್ ಕೇಳಿದ.

ಅವನ ನಾಲಿಗೆ ಸರಿಹೋಗಿತ್ತು.

ಅಮಿತಾಬ್ ಒಂದೇ ಬಾರಿಗೆ ನಾಲ್ಕು ಸಾಲು ಕುರ್ಚಿಗಳನ್ನ ದಾಟಿ—

"ರಾಜೀವ್ !" ಅಂತ ಕೂಗಿ ಕೊಂಡನಂತೆ.

ಮರುಕ್ಷಣ ರಾಜೀವ್ ಸೋನಿಯಾ ಜಯ–ಅಮಿತಾಬ್ ಜೊತೆ ಬಂದು ಓಂಪ್ರಕಾಶ್ ಗೋರಖ್‌ನಾಥ್ ಮುಂದೆ ನಿಂತರು.

"ರಾಜೀವ್-ಎಲ್ಲಿ ನೂರು ರೂಪಾಯಿ ಕೊಡು. ನಾನು ನಿಂಗೆ ಹೇಳ್ಳಿಲ್ಲ–ಈ ಇಬ್ಬರು ಧರಿಸಿರೋ ಸಫಾರೀ ಸೂಟುಗಳನ್ನು ಬಾಂಬೇ ಜಮ್‌ಷೆಟ್ಜಿ ಪೋಚಕನ್ ದಾರೂವಾಲಾ ಹೊಲಿದಿದ್ದು ಅಂತ ? ನೀನೇ ಕೇಳು ಇವರನ್ನ !" ಅಮಿತಾಬ್ ಹೆಮ್ಮೆಯಿಂದ ಹೇಳಿದ.

ಅಮಿತಾಬ್ ರಾಜೀವ್ ನಮ್ಮ ಸ್ನೇಹಿತರಿಬ್ಬರೂ ಹಸ್ತ ಲಾಘವಿತ್ತು ಅವರ ಟೇಸ್ಟಿಗೆ ತುಂಬಾ ಮೆಚ್ಚಿಕೊಂಡರಂತೆ.

ಅಷ್ಟರಲ್ಲಿ ಓಂಪ್ರಕಾಶ್ ಪೂರ್ತಿ ಚೇತರಿಸಿಕೊಂಡಿದ್ದ.

"ಮಿಸ್ಟರ್ ಅಮಿತಾಬ್, ಇಲ್ಲಿ ಆ ಚೈನಾ ಹುಡುಗಿ ಊನ್‌ಜಿಯಾನಿ ಇದ್ದರೆ ಪರಿಚಯ ಮಾಡಿಸ್ತೀರಾ ?" ಅಂತ ಕೇಳಿದ.

"ಏಕೆ ಹೇಳಿ ?" ಅಮಿತಾಬ್ ಆಶ್ಚರ್ಯದಿಂದ ಕೇಳಿದ.

"ಅವಳಿಂದ ನಮ್ಮ ಬಾಸ್ ಮಗಳಿಗೆ ಆಟೋಗ್ರಾಫ್ ಸಹಿತ ಫೋಟೋ ಕೊಡಿಸಬೇಕು" ಅಂದ ಓಂಪ್ರಕಾಶ್.

ಅದೇ ಕ್ಷಣದಲ್ಲಿ "ಅಂಕಲ್-ಅಂಕಲ್" ಅಂತ ಕೂಗುತ್ತಾ ಸುಮಾರು ಎಂಟು ವರ್ಷದ ಒಂದು ಹುಡುಗಿ ಮತ್ತೊಬ್ಬ ಬಲಿತ ಹುಡುಗಿ ಜೊತೆ ಓಡಿ ಬಂದು ಈ ಗುಂಪನ್ನ ಸೇರಿಕೊಂಡಿತ್ತು.

"ಸೀ ಮಿಸ್ಟರ್ ಅಮಿತಾಬ್-ಇವಳೇ ಜ್ಯೋತ್ಸ್ನ-ನಮ್ಮ ಬಾಸ್ ಮಗಳು" ಅಂದ ಓಂಪ್ರಕಾಶ್.

"ನಮಸ್ತೆ-ಇವರು ನನ್ನ ಆಂಟಿ-ಸುಷ್ಮಾ ಅಂದಳು ಜ್ಯೋತ್ಸ್ನ..

ಪರಸ್ಪರ ಪರಿಚಯ ಮುಗಿಯಿತು.

"ಮಿಸ್ಟರ್ ಓಂಪ್ರಕಾಶ್, ಮಿಸ್ಟರ್ ಗೋರಖ್‌ನಾಥ್, ಆ ಚೀನಾ ಹುಡುಗಿ ಊನ್‌ಜಿಯಾನಿ ಈಗ ಇಲ್ಲಿ ಸಿಗೊಲ್ಲ. ಇಂದ್ರಪ್ರಸ್ತಾ ಸ್ಟೇಡಿಯಂನಲ್ಲಿ ಪ್ರಾಕ್ಟೀಸ್ ಮಾಡ್ತಾನೋ ಅಥವಾ ಏಷಿಯಾಡ್ ವಿಲೇಜ್‌ನಲ್ಲೋ ಸಿಕ್ತಾಳೆ" ಅಮಿತಾಬ್ ಹೇಳಿದ.

"ಮತ್ತೇ ಆಕೇನ ಕಾಣೋ ಬಗೆ ?"

"ನೋ ಪ್ರಾಬ್ಲಮ್. ನೀವು ಹೇಗೆ ಬಂದಿದ್ದೀರಿ ?"

"ಟ್ಯಾಕ್ಸೀಲಿ" ಅಂದ ಗೋರಖ್‌ನಾಥ್.

"ನೋ ಪ್ರಾಬ್ಲಂ, ಮೈಕಾರ್ ಎಟ್‌ಯುವರ್ ಡಿಸ್ಪೋಸಲ್ ಎಂಡ್ ಸರ್ವಿಸ್. ಆಲ್ಸೋ ಡ್ರೈವರ್. ಅವನಿಗೆಲ್ಲಾಗೊತ್ತು. -ಅಂತ ಹೇಳಿ ಅಮಿತಾಬ್ ತನ್ನ ಕಾರನ್ನೂ ಡ್ರೈವರ್‌ನೂ ನಮ್ಮ ಸ್ನೇಹಿತರ ಸುಪರ್ದಿಗೆ ಒಪ್ಪಿಸಿದ.

—ಮಲ್ಹಾರಿರಾಯರು ಇಷ್ಟು ಹೇಳಿ, ಪರುಶು ಎರಡನೇ ಬಾರಿ ತಂದಿಟ್ಟಿದ್ದ ಸ್ಟ್ರಾಂಗ್ ಕಾಫೀನ ಮುಗಿಸಿ ಮುಂದುವರಿಸಿದರು—

"ಮುಂದೆ ಓಂಪ್ರಕಾಶ್ ಗೋರಖ್‌ನಾಥ್ ಇಬ್ರೂ ಜ್ಯೋತ್ಸ್ನ ಸುಷ್ಮಾರನ್ನ ಕರ್ಕೊಂಡು ಅಮಿತಾಬ್ ಕಾರಲ್ಲಿ ಹೋಗಿ ಏಷಿಯಾಡ್ ವಿಲೇಜ್‌ನಲ್ಲಿ ಊನ್‌ಜಿಯಾ

ನೀನ ಭೇಟಿ ಮಾಡಿದರು. ಅವಳಿಂದ ಜ್ಯೋತ್ಸ್ನಾ ಒಬ್ಬಳಿಗೇ ಅಲ್ಲದೆ ಸುಷ್ಮಾಗೆ ಮತ್ತು ತಮ್ಮ ತಮ್ಮ ಸ್ವಂತಕ್ಕೂ ಒಂದೊಂದು ಆಟೋಗ್ರಾಫ್ ಸಹಿತ ಅವಳ ಫೋಟೋಗ್ರಾಫ್ ಪಡೆದರು. ಸುಷ್ಮಾ ಹತ್ರ ಕ್ಯಾಮರಾ ಇತ್ತು. ಅಮಿತಾಬ್ ಡ್ರೈವರ್-ಊನ್‌ಜಿಯಾನಿ ಜೊತೆ ನಮ್ಮ ನಾಲ್ವರನ್ನೂ ನಿಲ್ಸಿ ಫೋಟೋ ಹಿಡಿದ. ಎಲ್ಲವೂ ಸಂತೋಷದಲ್ಲಿ ಮುಕ್ತಾಯವಾಯ್ತು.

"ಆಶ್ಚರ್ಯ !" ಅಂದರು ಮದ್ದೂರು ವಡೆ.

"ಹೌದು, ಆದರೆ ಇದಕ್ಕೆಲ್ಲಾ ಕಾರಣ ಯಾವುದು ? ಅದೇ ಬಾಂಬೇಲಿ ಜಮ್‌ಷೆಟ್ಜಿ ಫ್ರೋಚ್‌ಕನ್‌ದಾರೂವಾಲಾ ಹೊಲಿದ ಸಫಾರಿ ಸೂಟುಗಳು !" ಅಂದರು ಮಲ್ಹಾರಿರಾಯರು.

"ಬಿಲ್‌ಖುಲ್ ನಿಜ" ಒಪ್ಪಿದರು ಓಂಪುಡಿ.

"ಆದರೆ ಹಿಂದಿನ ದಿನ ಆ ಎರಡೂ ಸಫಾರಿ ಸೂಟುಗಳು ಒಂದು ರೀತಿ ಸಫಾರಿ ಬ್ರೂಟುಗಳ ಹಾಗೆ ವಿಚಿತ್ರ ರೀತಿಯಲ್ಲಿ ನಡಕೊಂಡಿದ್ದು ಏಕೆ ? ಆ ದಿನ ಅವಕ್ಕೆ ಯಾವ ರಾವು ಬಡಿದಿತ್ತು ?"

ಮಲ್ಹಾರಿ ರಾಯರು ಕೂಟದ ಮುಂದೆ ಒಂದು ಒಂದು ಬೃಹತ್ ಪ್ರಶ್ನೆ ಇಟ್ಟರು. ಒಳ್ಳೆ ಹಿಚ್‌ಕಾಕ್ ಪಿಕ್ಚರ್‌ನ ಹಿಂದೀಲಿ ಚಿತ್ರ ತೆಗೆದು ಅದನ್ನು ನಮಗೆ ತೋರ್ಸಿ ಕಥೆ ಹೇಳಿ—ಅಂತ ಕೇಳಿದಷ್ಟು ಸಮಸ್ಯೆಯಾಯ್ತು. ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ಯಾರಿಗೂ ಏನೂ ಹೊಳೆಯಲಿಲ್ಲ. ನಮ್ಮ ಕೂಟ ವನ್ನು ಈ ಸ್ಥಿತಿಗೆ ತಂದಿದ್ದಕ್ಕೆ ಬಾಳೇಕಾಯಿ ಬಜೆಯವರೇ ಕಾರಣರು ಅನ್ನುವಂತೆ ಓಂಪುಡಿ ಅವರನ್ನು ತಿಂದುಬಿಡುವ ಹಾಗೆ ನೋಡಿದರು. ನಮ್ಮ ರಕ್ತನಾಳಗಳು ಬಂದು ಒಡೆಯುವ ಸ್ಥಿತಿಗೆ ಬಂದಿದ್ದವು.

"ಕಾರಣ ಏನು—ನೀವೇ ಹೇಳಿ ಬಿಡಿ ರಾಯರೇ ! —ಅಂತ ಒಕ್ಕೊರಳಿಂದ ಕೇಳಿದೆವು.

ಮಲ್ಹಾರಿರಾಯರ ಮುಖ ಗಂಭೀರತಾಳಿತು.

"ರಿಲೇಟಿವಿಟಿ ! ಫೋರ್ತ್‌ಡೈಮೆನ್‌ಷನ್ ! ಓಮ್‌ಪ್ರಕಾಶ್ ಗೋರಖನಾಥ್ ಸಫಾರಿ ಸೂಟುಗಳು ಏನೋ ಕಾರಣದಿಂದ ಆ ಏನ ಫೋರ್ತ್‌ಡೈಮೆನ್‌ಷನ್ನಿಂದ ಪೀಡಿ ತವಾಗಿತ್ತು. ಪ್ರೊಫೆಸರ್ ಯು. ಆರ್. ರಾವ್ ಅಂಥವರು ಸರಿಯಾಗಿ ವರ್ಣಿಸ

ಬಲ್ಲರು. ನಿಜವಾಗಿ ಅವರಿಬ್ಬರ ಅಂದಿನ ಅನುಭವಕ್ಕೆ ಬೇರೆ ಯಾವ ಕಾರಣವೂ ಇರಲಿಲ್ಲ. ಬೇರೆ ಯಾವ ಕಾರಣವೂ ತಮಗೆ ಗೋಚರವಾಗಲಿಲ್ಲಾಂತ ಓಂಪ್ರಕಾಶ್ ಗೋರಖ್‌ನಾಥ್ ಕಂಪ್ಯೂಟರ್ ಕಂಪೆನಿಯ ಸೀನಿಯರ್ ಸೈಂಟಿಸ್ಟುಗಳೇ ಒಪ್ಪಿ ಕೊಂಡರು—ಅಂದ ಮೇಲೆ ನಾನೂ ನೀವೂ ಏನು ಹೇಳೋಕೆ ಸಾಧ್ಯ ? "

ಮಲ್ಹಾರಿರಾಯರು ಇಷ್ಟು ಹೇಳಿ ತಮ್ಮ ಪಂಪ್ ಷೂಗಳನ್ನು ಧರಿಸಿ ಗಂಭೀರ ವಾಗಿ ಎದ್ದು ನಿಂತರು.

ನಾವೂ ಎದ್ದೆವು.

"ರಾಯರೇ.... ಬಾಳೇಕಾಯಿ ಬಜೆ ಅನುಮಾನ ದಿಂದ ರಾಗ ಎಳೆದರು.

ಮಲ್ಹಾರಿರಾಯರು ಪ್ರಶ್ನಾರ್ಥಕವಾಗಿ ಬಾ. ಬ. ಕಡೆ ನೋಡಿದರು.

"ಅಲ್ಲಾ—ಮಸ್ಲಾ ಹೇಳ್ತೀನೆ ಕೋಪಿಸ್ಕೋಬೇಡಿ—ಮಸಲಾ ಒಂದು ವೇಳೆ ಆ ಸಫಾರಿ ಸೂಟುಗಳಿಟ್ಟಿದ್ದ ಆ ಗಿಲ್ಟ್ ಬಾಕ್ಸುಗಳು—ಮಸಲಾ—ಮೊದಲ್ನೇದಿನ ಟೇಬಲ್‌ಗಳ ಮೇಲಿಟ್ಟಾಗ ಅದುಲು ಬದಲಾಗಿರಬಹುದೇ ? "

ಬಾಳೇಕಾಯಿ ಬಜೆ ಕೇಳಿದ ಈ ಪ್ರಶ್ನೆಗೆ ಮಲ್ಹಾರಿರಾಯರು ಬದಲು ಹೇಳ ಲಿಲ್ಲ. ಬಾಳೇಕಾಯಿ ಬಜೆಯವರ ಕಡೆ ಒಂದು ರೀತಿಯ ಕನಿಕರದ ದೃಷ್ಟಿ ಬೀರಿ ತಮ್ಮ ವಾಕಿಂಗ್ ಸ್ಟಿಕ್ ಹಿಡಿದು ನಡೆದರು.

ನಾವೂ ಬಾ. ಬ. ಕಡೆ ಕನಿಕರದ ದೃಷ್ಟಿಬೀರಿ ಇನ್‌ಸ್ಟೀ....ಕ್ಷಮ್ಸಿ....ಮಲ್ಹಾರಿ ರಾಯರನ್ನ ಹಿಂಬಾಲಿಸಿ ನಡೆದವು.

# ಹೋಪದ್ದೆಲ್ಲಿಗೆ ????

ಸುನೀತಿ ಕೃಷ್ಣಸ್ವಾಮಿ.

---

ದೂರವಾಣಿ ಘಂಟೆ ಕರ್ಕಶವಾಗಿ ಬಾರಿಸಿತು.......ಟ್ರಿನ್ ಟ್ರಿನ್ ಟ್ರಿನ್........ ...ಟ್ರಿನ್ ಟ್ರಿನ್ ಟ್ರಿನ್.......ಟ್ರಿನ್.......ಟ್ರಿನ್

ಅದರ ಬಾಯಿ ಮುಚ್ಚಿಸದೆ ಹೊಡೆದುಕೊಳ್ಳಲು ಸ್ವತಂತ್ರ ನೀಡಿದ್ದ ಜಾನಿಯು ಗಂಡನ ಮೇಲೆ ಬಾಂಬು ಸಿಡಿಯಿತು.

"ದೂರವಾಣಿ ಬಡ್ಕೊಳ್ತಾ ಇರೋದು ಕೇಳಿಸ್ಲಿಲ್ವೇ ? ಇಲ್ಲಾ ಕಿವ್ಪೇ ? ಎದ್ಹೋಗಿ ನೋಡೋಕೇನೂಂತೀನಿ ? " ಇದ್ಯಾವುದರ ಪರಿವೆ ಇಲ್ದೆ ಘಂಟೆ ಬಜಾಯ್ಸ್ತಾನೇ ಇತ್ತು. ಜಾನಿ ಗಂಡ ತೊದಲ್ತಾ ಉಲಿದ.

"ಅಲ್ಲ....ಅಲ್ಲ....ಇಷ್ಹೊತ್ನಲ್ಲಿ ಬರೋ ಫೋನ್ ಕಾಲೆಲ್ಲಾ ನಿಂಗೇ ತಾನೇ ? ಅದಕ್ಕೇ ನೀನೇ ತೊಗೋತೀಯೇನೋಂತ ಸುಮ್ನೆ ಪೇಪರ್ ಓದ್ತಾ ಕೂತಿದ್ದೆ ....

"ನಿಮ್ ಬುದ್ಧಿಗಿಷ್ಟು....ಇವತ್ತು ಭಾನುವಾರ ಅಲ್ವೇನ್ರೀ ? ನನ್ನ ಸ್ನೇಹಿತ ರಾರೂ ಮಾಡೋಲ್ಲ .... ಸರಿ ಸರಿ ಮೊದ್ಲು ನೋಡಿ ಹೋಗಿ. ಅದರ ಬಾಯಿ ಮುಚ್ಚಿ ಹೋಗಿ. ಅಡಿಗೆ ಮನೆಯಿಂದ ಅಧಿಕಾರವಾಣಿ ಹೊರಬಿತ್ತು. ರಿಸೀವರ್ ಎತ್ತಿ ಯಾರೆಂದು ಕೇಳಿದ ಜಾನಿಯು ಗಂಡ ಅರೆಕ್ಷಣದಲ್ಲಿ ಹೆಂಡತಿಗೆ ವರದಿ ಒಪ್ಪಿಸಿದ್ದ.

"ನಾನು ಹೇಳ್ಲಿಲ್ವೇ ನಿಂಗೇ ಆ ಮೇಘ ಸಂದೇಶಾಂತಾ....ನಿನ್ನ ಸಮಾಜದ ಸೆಕ್ರೆಟರಿ ವಾರಿಜ ಮಾತಾಡ್ತಾ ಇರೋದು. ಜಾನಿ ಧಡಗುಟ್ಟುತ್ತಾ ಬಂದಳು. ಭಾನುವಾರ ವಾರಿಜ ಫೋನ್ ಮಾಡಬೇಕಾದ್ರೆ ಏನೋ ಭಾರಿ ಸಮಾಚಾರ ಹಾಗೂ ತುರ್ತು ಕರೆ ಇರ್ಬೇಕೂಂತ ಮನದಲ್ಲೇ ತರ್ಕಿಸಿ ರಿಸೀವರ್ ಕೈಗೆತ್ತಿದಳು.

" ಹಲೋ .... ನಾನು ಜಾನಕಿ ಮಾತಾಡ್ತಾ ಇರೋದು. ಏನ್ಸಮಾಚಾರಾ ವಾರಿಜಾ ? ಆತ್ತಕಡೆಯಿಂದ ಬಂದ ಸಮಾಚಾರದ ಪ್ರತಿಕ್ರಿಯೆಯಾಗಿ ಜಾನಿ ದೀರ್ಘವಾಗಿ "ಅಯ್ಯೋ ! ಹೌದಾ ? ಯಾವಾಗ ? ಈಗ್ಲೇ ಹೋಗೋಣ್ವಾ ? ಆಂ ! ಈಗ್ಲೇ ಬೇಡ್ವಾ ? ಹತ್ತು ಘಂಟೆಗೆ ಹೋಗೋಣ್ವಾ ? ಓ ! ಅಷ್ಹೊತ್ತಿಗೆ ಬರ್ತಾರಂತಾ ? ಖಂಡಿತಾ ತಾನೇ ? ಇಲ್ಲ .... ಇಲ್ಲ .... ಆದಕ್ಕಲ್ಲಾ ಕೇಳಿದ್ದು....

ನಿಮ್ ತಮ್ಮ ಅಲ್ಲೇ ಕೆಲ್ಸದಲ್ಲಿ ಇರೋದ್ರಿಂದ ನಿಮ್ಗೆ ಸಮಾಚಾರ ಗೊತ್ತಿರತ್ತೆ.... ಆದಕ್ಕೆ ಅನುಮಾನಾನೇ ಇಲ್ಲ....ಹಾಗಾದ್ರೆ ಬ್ರೈಟ್ ಬಣ್ಣಾನೇ ವಾಸಿ ಅಲ್ವಾ ? ಕೊಂಚ ಹೆವಿ ಮೇಕಪ್ ಮಾಡ್ಕೊಂಡು ಬಿಟ್ರೆ ವಾಸಿ ಅಲ್ವಾ ? ಒಂದು ಘಂಟೆ ತಡ ವಾದ್ರೂ ನಮ್ ಮುಖ ತಡೀ ಬೇಕು ನೋಡಿ....ಬಹಳ ಥ್ಯಾಂಕ್ಸ್ ಹೇಳಿದ್ದಕ್ಕೆ.... ಇಲ್ದಿದ್ರೆ ದ್ರಾಬೆ ಹಾಗೆ ಬಂದ್ಬಿಡ್ತಾ ಇದ್ದೆ.... ಸರಿ ಸರಿ ಅರ್ಥವಾಯ್ತು. ನಾನು ನಿಮ್ಮನೇ ಹತ್ರ ಬಂದ್ಬಿಡ್ತೀನಿ....ಇಬ್ರೂ ಒಟ್ಗೇನೇ ಹೋಗೋಣ....ಎಲ್ಲಾ ತಕ್ಕೂ ಜೊತೆ ಆಗುತ್ತೆ........ ಈ ಮಾತು ಕಥೆಗ ಮಂಗಳ ಹಾಡಿ ಜಾನಿ ಅಡಿಗೆ ಮನೆಗೆ ಧಾವಿಸಿ ಅರೆ ಬೆಂದ ಬೇಳೆ ಹೋಳಿಗೆ ಎಂದೋ ಮಾಡಿಟ್ಟಿದ್ದ ಹುಳಿ ಪುಡಿ ಆದರ ತಲೆ ಮೇಲೆ ಸುರಿದೇ 'ಹುಳಿ' ಅಂತ ಮಾಡಿ ಕೆಳಗೆ ಕುಕ್ಕಿದಳು, ಅವಸರದಲ್ಲಿ ಪ್ರೆಶರ್ ಕುಕ್ಕರ್ ಇಳಿಸಲೋಸುಗ ನಲ್ಲಿ ಕೆಳಗೆ ಆದಕ್ಕೆ ಸ್ನಾನ ಮಾಡಿಸಿದಾಗ (ಪುಣ್ಯಕ್ಕೆ ನಲ್ಲೀಲಿ ನೀರು ಬರ್‍ತಾ ಇತ್ತು!) ಆದೇ ಕೋಪದಿಂದ ಸಿಡಿದು ಅರ್ಧ ಪಾತ್ರೆ ಅನ್ನವೆಲ್ಲಾ ಕುಕ್ಕರ್ ತಳದ ನೀರಿನಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ವು! ಈ ಅನ್ನವನ್ನ ನ್ಸೋಸಿ ತೆಗೆದಿಡುವ ಕರ್ತವ್ಯ ಜಾನಿಯು ಗಂಡನದೇ. ಇಲ್ಲವಾದರೆ ಅವನ ಮೊಸರನ್ನಕ್ಕೆ ಅನ್ನ ಖೋತಾ. ಕಾರಣ ಇಷ್ಟೆ. ಸಮಾಜ ಸೇವೆ ಅಂತ ಜಾನಿ ಯಾವತ್ತೂ ಮೊದಲು ತಿಂಡಿ ಊಟ ಮಾಡಿ, ಮಿಕ್ಕಿದ್ದು (ಮಿಕ್ಕಿದ್ದರೆ ಜಾನಿಯು ಗಂಡನ ಅದೃಷ್ಟ!) ಪತಿಗೆ ಆವನು ಸತೀವ್ರತಾ ಶಿರೋಮಣಿ! ಪಾಪ! ಅವನೊಂದು ಮೂಗೆತ್ತು! ಹೆಂಡತಿ....ಅರ್ಥಾತ್ ಅಮ್ಮಾವ್ರ ಗಂಡ! ಆವಳಿಗೆ ಬಾಡಿ ಗಾರ್ಡ್! ರಾತ್ರಿ ಹೊತ್ತು ಯಾವುದಾದ್ರೂ ಸಭೆ ಸಮಾರಂಭಕ್ಕೆ ಹೋಗಿ ಹೊತ್ತಾದ್ರೆ ಎಸ್ಕಾರ್ಟ್ ಮಾಡುವ ಗಂಡು! ಆಟೋ ; ಟ್ಯಾಕ್ಸಿ ತಂದು ಹೆಂಡತಿಯನ್ನ ಅದರಲ್ಲಿ ಕುಕ್ಕರಿಸಿಸುವ ಗಂಡಾಳು. ಮನೆ ವಾಚ್‌ಮನ್....ಇತ್ಯಾದಿ.

ಈ ಜಾನಿ ಎಲ್ಲಿಗೆ ಹೋಗ್ತಾಳೆ ಅಂತ ಜಾನಿಯು ಗಂಡನಿಗೆ ಕೆಟ್ಟ ಕುತೂಹಲ. ಹಾಳಾದ್ದು ಉಪ್ಪು ಹುಳಿ ತಿನ್ನುವ ದೇಹ. ತಿಳಿದು ಕೊಳ್ಳುವ ಚಪಲ. ಕೇಳಲು ಹೆದರಿಕೆ. ಜಾನಿ ಎಂದೂ ಯಾರನ್ನೂ ಎಲ್ಲಿಗೂ ಯಾವತ್ತೂ ಯಾವ ನರಪ್ರಾಣೀನೂ ಪರ್ಮಿಷನ್ ಕೇಳಿ ಅವಳ ಜೀವಮಾನದಲ್ಲೇ ಗೊತ್ತಿಲ್ಲ. ಅವಳು ಸರ್ವತಂತ್ರ ಸ್ವತಂತ್ರ ಸ್ವೇಚ್ಛಾಜೀವಿ. ಅದು ಅವಳು ಕೇಳಿ ಬಂದ ಪುಣ್ಯ. ನಾಲಿಗೆ ತುದಿಗೆ ಬಂದ ಪ್ರಶ್ನೆ ಅಲ್ಲೇ ಉಳಿಯಿತು.

ಸರ್ವಾಲಂಕಾರಭೂಷಿತೆಯಾಗಿ ಕೋಣೆಯಿಂದಾಚೆ ಬಂದ ಜಾನಿಯನ್ನು ಎವೆ ಯಿಕ್ಕದೆ ನೋಡುತ್ತಿದ್ದಾನೆ ಜಾನಿಯು ಗಂಡ. ಊಹೆ ಹುಚ್ಚುಚ್ಚಾಗಿ ಕುಣಿಯುತ್ತಿದೆ. ಮದುವೆ ಮನೆಗೆ ಇರಬಹುದೇ ? ಕೈಯಲ್ಲಿ ಉಡುಗೊರೆಯಿಲ್ಲ. ಸಿನೆಮಾ ಇರ ಬಹುದೆ, ಇಂತಹ ಸೀರೆ ಅವಳು ಉಡುವವಳಲ್ಲ. ಆಕಾಶವಾಣಿಗಿರಬಹುದೇ ಹಾಗಿ

ದ್ದಲ್ಲಿ ಆವಳ ಕಾರ್ಯಕ್ರಮವಿದ್ದಲ್ಲಿ ಊರು, ಕೇರಿ, ಗಲ್ಲಿ, ಮನೆ ಹಾದಿ ಬೀದಿಯಲ್ಲಿ ಪ್ರಸಾರ ಮಾಡಿರುತ್ತಿದ್ದಳು, ಆಗ ತನ್ನ ಕಿವಿಗೂ ಬೀಳುವುದಿತ್ತು. ಟಿ.ವಿ. ಇರಬಹುದೇ ? "ನಿಮ್ಮ ನಾಟಕ ನಮಗೆ ಹಿಡಿಸಲಿಲ್ಲವೆಂದು ದೂರದರ್ಶನದವರು ಫೋನು ಮಾಡಿದಾಗ ತಾನೇ ರಿಸೀವ್ ಮಾಡಿ ಕೇಳಿಸಿಕೊಂಡು ತದನಂತರ ಜಾನಿಯ ಕೈಲಿ ಹೇಳಿದಾಗ ಬೈಸಿಕೊಂಡಿದ್ದ....ಹಾಗಾದರೆ ಇವಳು ಹೋಗುವುದೆಲ್ಲಿಗೆ ? ಪೆದರುತ್ತಲೇ ಗಂಟಲು ಸರಿಪಡಿಸಿಕೊಂಡು

" ಜಾನೀ........ ರಪ್ಪನೆ ರಾಚಿದಳು.

" ಇಲ್ನೋಡಿ....ಹೊರಡುವಾಗ ಎಲ್ಲೀಗೆ ? ಯಾತಕ್ಕೆ ? ಯಾವಾಗ ಬರ್‍ತೀ ? ಒಂದೂ ಕೇಳಬೇಡಿ. ಇವತ್ತು ನಗರ ಪ್ರದಕ್ಷಿಣೆ ದೂರದರ್ಶನದಲ್ಲಿ ನೋಡಿದಾಗ ಗೊತ್ತಾಗುತ್ತೆ ರೊಯ್ಯನೆ ಸೆರಗು ಬೀಸಿಕೊಂಡು ಬಾಗಿಲಾಚೆ ಹೋದಳು ಜಾನಿ. ಅವಳು ಹಾಕಿದ್ದ 'ಚಾರ್ಲಿ' ಪರ್ಫ್ಯೂಮ್ ಗಾಳಿಯಲ್ಲಿ ತೇಲಿ ಬಂದು ಇವನ ಮೂಗು ಅಪ್ಪಳಿಸಿತ್ತು.

ಪ್ರಿಯ ಓದುಗರೆ ! ಜಾನಿ ಹೋದದ್ದೆಲ್ಲಿಗೆ ? ಎಂಬ ಚಿದಂಬರ ರಹಸ್ಯವನ್ನು ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಅಂದು ಬೆಳಿಗ್ಗೆ ಹೆಸರಾಂತ ಸಾಹಿತಿ ಒಬ್ಬರ ನಿಧನವಾಗಿತ್ತು. ಅವರ ಅಂತಿಮ ಯಾತ್ರೆಯ ದೃಶ್ಯವನ್ನು ದೂರದರ್ಶನದವರು 'ಕವರ್' ಮಾಡಬಹುದೆಂದೂ ಹತ್ತು ಘಂಟೆಯ ಹೊತ್ತಿಗೆ O. B. Van ಬರಬಹುದೆಂಬ ನಿರೀಕ್ಷೆ ಇದೆಯೆಂಬ ಸುದ್ದಿ ವಾರಿಜ ತಮ್ಮ ಅಕ್ಕನಿಗೆ ಫೋನ್ ಮಾಡಿದ್ದ....ಇಲ್ಲ ಇಲ್ಲ ಇಲ್ಲಿ ಕೊಂಚ ನಾನು ತಪ್ಪಿದೆ. ಹೆಸರಾಂತ ಸಾಹಿತಿಗಳೂ ಗಣ್ಯ ವ್ಯಕ್ತಿಗಳೂ ಆಗಿದ್ದ ಶ್ರೀ....ಶ್ರೀ....ಶ್ರೀಯವರ ಅಂತಿಮ ಯಾತ್ರೆಯ ಚಿತ್ರ ತೆಗೆಯಬಹುದಲ್ಲವೇ ಎಂದು ವಾರಿಜ ಅವರೇ ದೂರದರ್ಶನಕ್ಕೆ ಫೋನ್ ಮಾಡಿದ್ದರು. ಅಡು ಮುಟ್ಟದ ಸೊಪ್ಪಿಲ್ಲ. ವಾರಿಜ, ಜಾನಿ ಇಲ್ಲದ ಸ್ಥಳವಿಲ್ಲ. ಅಂದ ಮೇಲೆ ಸಾವು ನೋವು, ಮದುವೆ ಮಸಣ, ಸಭೆ ಸಮಾರಂಭ ಸಾಹಿತ್ಯ ಚಿತ್ರ, ಎಲ್ಲೆಲ್ಲಿಯೂ ಈರ್ವರೂ ಜೊತೆ. ಇಬ್ಬರೂ ದೊಡ್ಡ ಕೈಚೌಕ ಹಿಡಿದು ಎಲ್ಲರನ್ನೂ ದಾಟಿ, ಕೆಲವರ ಕೈ ತುಳಿದು, ಕೆಲವರ ಕಾಲು ತುಳಿದು ಹೇಗೋ ದಾರಿ ಮಾಡಿಕೊಂಡು ಹೆಸರಾಂತ ಸಾಹಿತಿಗಳ ಪಾರ್ಥಿವ ಶರೀರದ ಹತ್ತಿರ ಆಗಾಗ್ಗೆ ಕಣ್ಣೊರೆಸುತ್ತಾ (ಬರದ ಕಣ್ಣೀರನ್ನು ಉಜ್ಜಿ ಉಜ್ಜಿ ತಿಕ್ಕಿದರು) ನಿಂತೇ ನಿಂತರು ! ಕಾಲು ಸೋತವು. ಮೇಕಪ್ ಕರಗಿತ್ತು, ದೂರದರ್ಶನದವರು ನಾ ಪತ್ತೆ !

" ಓ ! ವ್ಯಾನ್ ಬಂತು ! ಎಂದು ಗುಂಪಿನಲ್ಲಿ ಯಾರೋ ಗಟ್ಟಿಯಾಗಿ ಕಿರುಚಿದರು. ಮನೆಯವರೆಲ್ಲಾ ಗೊಳೋ ಎಂದು ಅಳುತ್ತಾ

"ಹೊರಟು ಹೋಗ್ತಿಯಾಪ್ಪಾ ಎಂದು ರೋದಿಸಿದರು. ಜಾನಿಗೆ ಜೀವ ಬಂತು. ವಾರಿಜ ಜಾನಿಯನ್ನು ತಿವಿದಳು. ಕೈ ಚೌಕ ಮತ್ತೆ ಕಣ್ಣು ತಿಕ್ಕಿದವು. ಒಂದು ಕಣ್ಣಿನಲ್ಲೇ ಬಾಗಿಲಾಚೆ ನೋಡಿದಳು ಜಾನಿ. ಬಂದಿದ್ದು ಕಾರ್ಪೊರೇಷನ್ ವ್ಯಾನು! ಹತ್ತಿರದಲ್ಲೇ ನಿಂತಿದ್ದ ಸಾಹಿತಿ ಬಳಗದವರನ್ನು ಕೇಳಿಯೇ ಕೇಳಿದಳು.

"ಇಂಥಾ ದೊಡ್ಡ ಸಾಹಿತಿಗಳು! ದೂರದರ್ಶನದವರು ಬರಬೇಡ್ವೇ? ಎಂಥಾ ಅನ್ಯಾಯ" ರೋಷ, ನಿರಾಶೆ ಎಲ್ಲಾ ಕ್ರೋಢೀಕರಿಸಿ ಕರ್ಕಶವಾಗಿ ಉಲಿದಳು.

"ಬರಬೇಕಾಗಿತ್ತು. ಆದರೆ ತಾಂತ್ರಿಕ ಅಡ್ಡಿಯಿಂದ ಬರಲಿಲ್ಲ.


"ಅಯ್ಯೋ! ಹೌದೇ?"

ಬವಳಿ ಬಂದು ಬಿದ್ದ ಜಾನಿಯನ್ನು ಯಾರೋ ಹೊತ್ತು ತಂದು ಮನೆಗೆ ತಲುಪಿಸಿದ್ದರು.

○

---

## ಪರೀಕ್ಷೆ ಬಂತು—




"ಇನ್ನೊಂದು ಮಾರ್ಕ್ ಮಾಡ್ಬಿಡು, ಅಷ್ಟುಮಾತ್ರ ಮಗ್ ಮಾಡ್ಬಿಡೋಣ!"

# ಎಲ್ಲಾ ಪುಸ್ತಕದಲ್ಲಿ ಹೇಳಿದ ಹಾಗೆ!

ಪೀಪಿ

---

'ಎಲ್ಲಾ ಪುಸ್ತಕದಲ್ಲಿ ಹೇಳಿದಹಾಗೇ ಮಾಡಿದೀನಿ——

'ಹೂಂ——ಪರವಾಗಿಲ್ಲ. ಮೊದಲ ಅಡಿಗೆ ಹೇಗೇ ಇದ್ರೂ ರುಚಿಯಾಗೇ ಇರುತ್ತೆ ಕಣೆ ಹೆದರಬೇಡ.——

'ಬೇಳೆ, ಕಾಳು, ನೀರು, ಉಪ್ಪು, ಹುಳಿ, ಅರಿಶಿಣ, ಮೆಣಸಿನ ಪುಡಿ....ಎಲ್ಲಾ ತೂಕ ಮಾಡಿ, ಅಳತೆ ಮಾಡಿ ಹಾಕಿದೀನಿ ಅಂದ್ರೆ——

'ಅಲ್ವೇ ಮತ್ತೆ ? ಹದ ಬರಬೇಕಲ್ಲ, ನೀನು ಮಾಡಿದ ಅಡಿಗೆ ಅಂದ್ರೆ ಎಲ್ಲಾ ಕರಾರು ವಾಕ್ಕಾಗಿರುತ್ತೆ ಬಿಡು. ನೀನು ಎಲ್ಲಾ ವಿಚಾರದಲ್ಲೂ ಕರಾರುವಾಕ್ಕೇ ಅಲ್ವೆ ?

ಬನ್ನಿ ಕುತ್ಕೊಳ್ಳಿ——ಅಡಿಗೆ ಟೆಂಪರೇಚರ್ ಇಳಿದು ಹೋದ್ರೆ ಅಷ್ಟೊಂದು ಚೆನ್ನಾಗಿ ರಲ್ಲ, ಬಿಸಿ ಬಿಸಿಯಾಗೇ ಬಡಿಸಿ ಅಂತ ಬರೆದಿದಾರೆ ಪುಸ್ತಕದಲ್ಲೆ——

ಹೂಂ——ಬಡಿಸು, ನಿನ್ನ ಕೈ ಅಡಿಗೆ ಮೊದಲ ರುಚಿ ನೋಡೋಣ——ಮದುವೆ ಯಾದೋರಿಗೆ ಮೊದಲುಗಳು ಜೀವನ ಪರ್ಯಂತ ಜ್ಞಾಪ್ಕ ಇರುತ್ತೆ——ಮೊದಲ ನೋಟ, ಮೊದಲ ಚುಂಬನ, ಮೊದಲ ರಾತ್ರಿ——

'ಥೂ ಹೋಗೀಂದ್ರೆ, ನಿಮಗೆ ನಾಚಿಕೇನೇ ಇಲ್ಲ——

'ಹೋಗ್ಲಿ ಬಿಡು——ಅದರ ಜೊತೇಗೆ ಮೊದಲ ಅಡಿಗೇನೂ ಸೇರಿಸಿಕೋ—— ಬಾ, ಕೂಂತ್ಕೋ ಇಬ್ರೂ ಒಟ್ಟಿಗೆ ಊಟಮಾಡೋಣ——ಭೂಮು ಅಲ್ದಿದ್ರೂ—— ನಿಂಗೆ ನಾ ಬಡಿಸ್ತೀನಿ, ನಂಗೆ ನೀನು ಬಡಿಸು....——

'ಬೇಡ ಬೇಡ, ನಿಮ್ಮದು ಮೊದಲು ಆಗ್ಲಿ——

'ಓಹೋ ಈಗಿನಕಾಲದಲ್ಲೇ ಅಷ್ಟೊಂದು ಪಾತಿವ್ರತ್ಯ ತೋರಿಸೋ ಅವಶ್ಯಕತೆಯಿಲ್ಲ. ಬಾಬಾ, ಕೂತ್ಕೋ——

'ಊಹುಂ, ಬಿಲ್‌ಕುಲ್ ಸಾಧ್ಯವಿಲ್ಲ——ಮೊದಲು ನಿಮ್ಮದಾಗಲಿ——ಆ ಮೇಲೆ'

ನೀನು ಅಷ್ಟೊಂದು ಹಠ ಹಿಡಿದ್ರೆ, ಹಾಗೇ ಆಗ್ಲಿ ಬಿಡು....ಹೂಂ ...

ಬಡಿಸು— ಏನೇನು ಮಾಡಿದಿ, ಪ್ರಥಮ ಪಾಕ ಶಾಸ್ತ್ರ ಪ್ರಯೋಗದಲ್ಲೆ ?'

'ಅನ್ನ, ಸಾರು, ಬೆಂಡೆಕಾಯಿ ಗೊಜ್ಜು, ರಾಯತ, ಹುರುಳಿಕಾಯಿ ಹುಳಿ, ಕೋಸಿನ ಪಲ್ಯ ಅಂಬೊಡೆ. ಶಾವಿಗೆ ಖೀರು....

'ಹಬ್ಬಾನೇ ಮಾಡ್ಬಿಟ್ಟಿದ್ದೀಯಲ್ಲ. ಭೇಷ್, ಕಷ್ಟ ಆಗ್ಲಿಲ್ವೇ ಒಬ್ಬಳಿಗೇ ಇವ್ವೆಲ್ಲಾ ಮಾಡೋಕೆ ?' ಏನೂ ಕಷ್ಟ ಆಗಲಿಲ್ಲ...ಎಲ್ಲಾ ಪುಸ್ತಕದಲ್ಲೆ ಹೇಳಿದ್ದಾರೆ— ನೋಡಿಕೊಂಡು, ನೋಡಿಕೊಂಡು ಮಾಡಿದೆ.......ಶುರುಮಾಡಿ, ಬೀಸಣಕೇಲಿ ಗಾಳಿ ಹಾಕ್ತೀನಿ....

"ಬೀಸಣಿಕೆ ಯಾಕೆ ? ಫ್ಯಾನ್ ಹಾಕು ಬೇಕಾದ್ರೆ........

"ಉಹುಂ....ಬೀಸಣಿಕೇಲೀ ಗಾಳಿ ಹಾಕಬೇಕು....ಪುಸ್ತಕದಲ್ಲಿ ಹಾಗೇ ಹೇಳಿ ರೋದು....

"ಸರಿ.... ನಿನ್ನಿಷ್ಟ....

ooooooooo

"ಚೆನ್ನಾಗಿತ್ತಾಂದ್ರೆ ನನ್ನ ಅಡಿಗೆ ?

"ಓಹ್ಹೋ, ನಾನಾಗ್ಲೇ ಹೇಳಲಿಲ್ವೇ....ಮೊದಲ ಅನುಭವ ಯಾವಾಗ್ಲೂ ರುಚಿಯಾಗೇ ಇರುತ್ತೇಂತ....ಹುಂ....ಈಗ ನೀನು ಕೂತ್ಕೋ ನಾನು ಬಡಿಸ್ತೀನಿ....

"ಈಗ್ಲೇ ಬೇಡೀಂದ್ರೆ....ಇನ್ನೂ ಅರ್ಧಗಂಟೆಯಾಗ್ಲಿ....

"ಯಾಕೇ, ಮಾಡ್ತಾ ಮಾಡ್ತಾ ಎಲ್ಲಾ ಪದಾರ್ಥದ ರುಚೀನೂ ನೋಡಿ ಹೊಟ್ಟೆ ತುಂಬಿ ಹೋಗಿದ್ಯೋ ಹೇಗೆ ? "

"ಒಂಚೂರು ಬಾಯಿಗೆ ಹಾಕಿದ್ರೂ ನಿಮ್ಮಾಣೆ"

"ಕೂತ್ಕೋ ಮತ್ತೆ, ಬಡಿಸ್ತೀನಿ, ಊಟಮಾಡು....

ಬೇಡಾಂದ್ರೆ... ಅರ್ಧ ಗಂಟೆ ಆದ್ಮೇಲೆ ಮಾಡ್ತೀನಿ, ಪುಸ್ತಕದಲ್ಲೇ ಹಾಗೆ ಹೇಳಿದಾರೆ....

"ಪುಸ್ತಕದಲ್ಲಿ ? ಯಾವ್ದೇ ಆ ಪುಸ್ತಕ ? "


"ಅದೇರೀ 'ನವಗೃಹಿಣಿಯರಿಗೆ ಪಾಕಶಾಸ್ತ್ರ ಪ್ರವೇಶ—ಸುಲಭೋಪಾಯ ಹಾಗೂ ಸುರಕ್ಷತಾ ಕ್ರಮಗಳು' ಅಂತ ಮೊನ್ನೆ ತಂದ್ನಲ್ಲಾ.... ಅದ್ರಲ್ಲೇ ಮೊದಲು ಅಡಿಗೆ ಮಾಡಿ ಪತಿದೇವನಿಗೆ ಬಡಿಸಿ, ಗೃಹಿಣಿಯು ಅರ್ಧ ಗಂಟೆಯ ತನಕ ಅವನನ್ನು ನಿರೀಕ್ಷಿಸತಕ್ಕದ್ದು. ಪತಿದೇವನಿಗೆ ಏನೂ ಆಗದೆ ಮನೋ ದೈಹಿಕ ಆರೋಗ್ಯ ಸಮನಾಗಿದ್ದ ಪಕ್ಷದಲ್ಲಿ, ಗೃಹಿಣಿಯು ತದನಂತರ ಊಟ ಮಾಡತಕ್ಕದ್ದು, ಅಂತ ಬರೆದಿದೆ....

"ಹೌದೇನೇ ? ಇನ್ನೂ ಏನಾದ್ರೂ ಬರ್ದಿದ್ಯೇನೇ ಅದ್ರಲ್ಲಿ ? ಹೇಳೇ ಬೇಗ. ಪತಿದೇವನಿಗೆ ಏನಾದ್ರೂ ಆದ್ರೆ ಏನು ಮಾಡಬೇಕು ಅಂತ ಹೇಳಿದೆ ಪುಸ್ತಕದಲ್ಲಿ ? "

"ಪತಿದೇವನಿಗೆ ಏನಾದ್ರೂ ವ್ಯತ್ಯಾಸವಾದ ಪಕ್ಷದಲ್ಲಿ, ಸದರಿ ಗೃಹಿಣಿಯು ಹೋಟೆಲಿಗೆ ಹೋಗಿ ಊಟ ಮಾಡತಕ್ಕದ್ದು ಅಂತ ಬರೆದಿದ್ದಾರೆ... ಅರ್ಧಗಂಟೆ ಆಗ್ಲಿ ಅಂತ ಕಾಯ್ತಾ ಇದೀನಿ ಸ್ವಲ್ಪ ಸುಮ್ನಿರಿ. ಯಾಕೆ ಅವಸರ ಮಾಡ್ತೀರ ? "

□

## ಚುನಾವಣೆಯ ನಂತರ—



"ಪಕ್ಷಾಂತರ ಮಸೂದೇನಾ ಮತದಾರರಿಗೆ ಕಡ್ಡಾಯ ಮಾಡಬೇಕು ಕಣೇ !"

# ಮತದಾರರ ಪ್ರಜ್ಞೆ

—ಅ.ರಾ.ಸೇ.

ಇನ್ನೊಂದು ಅದ್ಭುತ ಘಟನೆ ನಡೆದಿದೆ. ಬಿ ಬಿ ಸಿಯು ಹೇಳಿದ್ದಕ್ಕಿಂತ ಕೆಲವೇ ಕಡಿಮೆ ಸ್ಥಾನಗಳನ್ನು ಜನತಾ ಪಡೆದಿದೆ. ಕೇಂದ್ರದಲ್ಲಿ ಭದ್ರತೆ, ಬಲಿಷ್ಠತೆಗಳಿಗೂ, ಸ್ಥಳೀಯವಾಗಿ ಪೋಲು ಮಾಡಿದ ಕನ್ನಡಿಗರಿಗೆ ಎದುರಾರು ? ಕೇಂದ್ರದ ಹಾಗೂ ರಾಜ್ಯದ ವಿಜೇತರಿಗೆ ಹಾರ್ಧಿಕವಾದ ಅಭಿನಂದನೆಗಳನ್ನು ಸಲ್ಲಿಸಿ ಮತದಾರರ ಪ್ರಜ್ಞೆಯನ್ನು ಅರಿಯಲೆಂದು ನಾವು ಮಾಡಿದ ಯತ್ನಗಳ ವರದಿಯನ್ನು ತಮಗೆ ಸಾದರ ಪಡಿಸುತ್ತಿದ್ದೇವೆ.

ಮೊದಲ ಸಂದರ್ಶನ ಶ್ರೀ ತಿಪ್ಪಣ್ಣನವರದು. ನಾವು—ತಾವು ಯಾರಿಗೆ ಓಟು ಮಾಡಿದ್ದೀರಿ ?

ತಿಪ್ಪಣ್ಣ—ಓಟುದಾರರನ್ನು ಮತಗಟ್ಟೆಗೆ ಅಟ್ಟುವುದರಲ್ಲೇ ಕಾಲಕಳೆದ ನನಗೆ ಓಟುಮಾಡಲು ಆಗಲಿಲ್ಲ.

ನಾವು—ನಿಮ್ಮ ಅಭ್ಯರ್ಥಿ ಗೆದ್ದನೋ ?

ತಿಪ್ಪಣ್ಣ—ಇಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಅದು ಜನತೆಯ ಅಭಿಮತವಲ್ಲ.

ನಾ—ಹೌ ಕಂ ?

ತಿಪ್ಪಣ್ಣ—ಮೂರನೇ ಬರಗಾಲವನ್ನೆದುರಿಸಲು ಓಟುದಾರರೆಲ್ಲ ಥಾನಲ್ ಏರಿಯಾಗಳಿಗೆ ಹೋಗಿದ್ದಾರೆ.

ನಾವು—ಕರೆತರಬೇಕಾಗಿತ್ತು, ಓಟುಮಾಡುವುದು ಪರಮ ಪವಿತ್ರ ಕರ್ತವ್ಯವಲ್ಲವೇ ?

ತಿಪ್ಪಣ್ಣ—ಬದುಕುವುದು ಮೊದಲ ಕರ್ತವ್ಯ.

ನಾವು—ಇದುವರೆಗೆ ನೀವು ಬೆಂಬಲಿಸುತ್ತಿದ್ದ ಪಕ್ಷವನ್ನೇಕೆ ಬಿಟ್ಟಿರಿ ?

ತಿಪ್ಪಣ್ಣ—ಅವರು ನನ್ನನ್ನು ಕರೆಯಲೇ ಇಲ್ಲ. ಕರೆದವರ ಜೊತೆಗೆ ಹೋದೆ.

ನಾವು—ಈಗ ಬಿದ್ದ ಓಟುಗಳು ?

ತಿಪ್ಪಣ್ಣ—ಓಟುಗಳು ಯಾವಾಗಲೂ ಬಿದ್ದು ಹೋಗುತ್ತವೆ.

ನಾವು—ಒಬ್ಬ ಗೆದ್ದನಲ್ಲ ?

ತಿಪ್ಪಣ್ಣ—ಯಾರೋ ಒಬ್ಬರು ಗೆಲ್ಲಲ್ಲೇ ಬೇಕು !

ನಾವು—ಹೀಗಾದರೆ ನೀವು ಸೋಲನ್ನು ಒಪ್ಪಲಿಲ್ಲ ಎಂದಾಗುತ್ತದೆ,

ತಿಪ್ಪಣ್ಣ—ಸೋಲುವುದು ಜನತೆಯ ಜಾಯಮಾನ, [ಇವನು ಇಂತಹವನು ಎಂದು ತಿಳಿಯಿತೆ] ನಾವೂ ಸೋಲನ್ನು ಒಪ್ಪಿಕೊಂಡು, ನಮ್ಮ ಹಳೆಯ ಮಿತ್ರ, ಬೊಮ್ಮನನ್ನು ಹುಡುಕಿಕೊಂಡು ಹೋದೆವು, ಅವನಿಗೆ ಕೆಂಡಾಮಂಡಲ ಜ್ವರ, ಕರ್ತವ್ಯದೃಷ್ಟಿಯಿಂದ ಅವನನ್ನು ಕೇಳದೆವು.

ನಾವು    ನಿನ್ನ ಜಂತಾ ಬಂತಲ್ಲ !

ಬೊಮ್ಮ .    ಯಾರು ಬಂದ್ರೂ ಅಷ್ಟ್ರಗೇ ಐತೆ.

ನಾವು    ಯಾಕಯ್ಯಾ ಗೆದ್ದದೀ    ಹಂಗಾದ್ರೂ.........

ಬೊಮ್ಮ .    ನಾನಲ್ಲ ಗೆದ್ದಿರದು, ಶೇಕರಪ್ಪ.

ನಾವು    ಶೇಖರಪ್ಪ ಅಲ್ಲೋ ಜಂತಾ,

ಬೊಮ್ಮ    ಎಲ್ಲೀ ಜಂತಾ, ಎಲ್ಲೀ ಅಪ್ಪ ? ಕೊಂಡಾಮಂಡಲ ಜ್ವರ ಬಂದರೆ. ಉಳಿತಿನೋ ಇಲ್ಲೋ ?

ನಾವು    ಮರಕ್ಕೆ ಬರ್ತ್ತೇನೋ, ಮನಶಾರ್ನ- ಬಿಟ್ಟು,

ಬೊಮ್ಮ    ಎಲಕ್ಶನ್ ಹಿಂದ್ಲ್ದಿನ, ಶೇಕ್ರಪ್ಪ, ನಿಂಗೆ ಎಲ್ಲಾ ಸಬ್ಜಟ್ ಮಾಡ್ತಿನೀ. ನಮ್ಮನ್ನ ಮರಿಬ್ಯಾಡ ಅಂದ. ನಂಗೆ ಜೊರ ಬಂದೈತೆ ವೋಟಿಗೆ ಬರಲ್ಲ ಅಂದೆ. ಅವತ್ರಾತ್ರೆ ಮನೆವಾಕ್ಯಾಗೆ ಅಂಗೆ ಅಂಗೆ ಭರ್ ಅಂತ ಕಲ್ ಹಾರಾಡಿದ್ವು. ಈ ಮಗ್ನೇ ಹೋದೊರ್ಸ ನನ್ನ ಕಾಲ್ಮುರ್ರ್ಯಹಂಗೆ ಒದ್ದಿದ್ದ. ನೀನೇ ಔಸ್ದ ಹಾಕಿಸ್ದೆಲ್ಲಪ್ಪ ಸ್ವಾಮ್ಯಿ ಅಯ್ಯಯ್ಯೋ ಸಂಕಟಾಕ್ಕತೆ, ಒಂದಿಷ್ಟು ಗುಲ್ಕೋಸ್ ನೀರಾರ ಇದ್ದಿದ್ರೆ............

ನಾವು : ಬೊಮ್ಮಾ ನಿಂಗಿವತ್ತು ಜ್ವರ ಇರಬಹುದು. ಸಂಕಟ ಇರಭೌದು. ಆದ್ರೆ ಬಿ ಬಿ ಸಿ, ವಿ ಒ ಎ. ರಷ್ಯಾ. ಸ್ಕಾಂಡಿನೇವಿಯಶಾ ಎಲ್ಲ ನಿನ್ನ ಪ್ರಜ್ಞೆಯನ್ನು ಹೊಗಳುತ್ತಾ ಗುಣಗಾನ ಮಾಡ್ತಾ ಇವೆ.

ಬೊಮ್ಮ. ಆಡೇ ಆಗಲು, ಸೂರ್ಯ ನೆತ್ತಿ ಮ್ಯಾಲೆ ಸುಡ್ತಾ ಅದನೆ. ಮೈಯೆಲ್ಲಾ ಬರೆ ಹಾಕಿಧಂಗೆ ಆಗೆತೆ. ಹೊಟ್ಟೆಗೆ ಬೆಂಕಿ, ಅನಾಮುತ್ತು ನನ್ನ ಎತ್ಗೆಂಡು ಹೋಗಿ ಭೂತದಗೆ ಬಿಟ್ಟು ಕಣ್ಣು ಕತ್ಲುಗುಡಸ್ತವೆ, ಆವರ್‍ಯಾರೋ ನಾಯೇಬ್ರು, ನಿಮ್ಮಪ್ಪಯಾರು. ನಿಮ್ಮ ಮಗ್ಲು ಮನೇರ್‍ಯಾರು, ನಿನ್ನ ಬಳ್ಳಿಕ್ಕು ಮೋಜಿನ್ಯಾಕೆ ಅಂತ ಚೇಪಟ್ಟು ಮಾಡಿದ್ರು. ಹೋಗಿ ಒತ್ತಿ ಬಂದೆ. ನನ್ನ ಎತ್ಗೆಂಡು ಬಂದರು, ಸತ್ತು ಹೋದ್ರೋ ಏನೋ ? ಒಬ್ನೂ ಇಲ್ಲ; ಬಿದ್ಕಂತ, ಎದ್ಕಂತ ಮನೆಗೆ ಬಂದೆ.

ನಾವು : ನೀನು ನಮ್ಮ ರಾಷ್ಟ್ರದ ಹೆಮ್ಮೆ. ಯಾರಿಗೆ ಹಾಕಿದ್ದೆ ಓಟು ?

ಬೊಮ್ಮ. ಕತ್ಲಗೆ ಏನೇನು ಕಾಣೆಸ್ಲಿಲ್ಲ. ಒಂದ್ಸರ್‍ತಿ ಬಿಡ್ಸಿ, ಒತ್ತಿ ಬಂದೆ.

ನಾನು : ತನ್ನ ಅನಾರೋಗ್ಯವನ್ನು ಕಡೆಗಣಿಸಿ, ಪ್ರಜಾಪ್ರಭುತ್ವದ ಯಶಸ್ಸಿಗಾಗಿ ತನ್ನ ಪವಿತ್ರ ಕರ್ತವ್ಯವನ್ನು, ಹೃದಯಾಂತರಾಳದ ಪ್ರೇರಣೆಯಿಂದ ನೆರವೇರಿಸಿದ ಈ ಶ್ರೀ ಸಾಮಾನ್ಯನಿಗೆ ಔಷಧೋಪಚಾರಕ್ಕಾಗಿ, ಅದಕ್ಕಿಂತ ಮೊದಲು ಸ್ವಲ್ಪ ಗುಲ್ಕೋಸ್ ನೀರಿಗಾಗಿ ಐದು ರೂಪಾಯಿ ಕೊಡು.

ನನ್ನ ಮಿತ್ರ : ಆದು ಶೇಖರಿಯ ಕರ್ತವ್ಯ. ನನ್ನದಲ್ಲ.

ನಾನು : ಪ್ರಜಾಪ್ರಭುತ್ವದಲ್ಲಿ ಹಕ್ಕುಗಳು ಮುಖ್ಯ. ಜವಾಬ್ದಾರಿ ಅಮುಖ್ಯ

ಮಿತ್ರ. ಆದಕ್ಕೆಂದೇ ನಾನು ಹಣ ತೆರಲು ನಿರಾಕರಿಸುತ್ತೇನೆ. ಶೇಕ್ರಿ, ಬೇಕಿದ್ರೆ, ಸಬ್ಜೆಟ್ ಮಾಡ್ಲಿ.

ಮುಂದಿನ ಸರದಿ ಪ್ರಜ್ಞಾವಂತ ಮತದಾರ ಅಲಂಕಾರನದು, ಅವನು ಬಸಣ್ಣನ ಶಿಷ್ಯ, ಸ್ವಜಾತೀಯತೆಯೇ ರಾಷ್ಟ್ರೀಯತೆ ಎಂಬ ಬೋಧೆ ಅವನಿಗೆ ಪ್ರಪ್ರಥಮವಾಗಿ ಬೋಧಿಸಲ್ಪಟ್ಟಿದು ಬಸಣ್ಣನಿಂದಲೇ. ಅವನು ನವಿಲೇಹಾಳಿನಲ್ಲಿ ಪಾಪಣ್ಣನಿಗೂ, ತುರುಚನಳ್ಳಿಯಲ್ಲಿ ಬೋರಣ್ಣನಿಗೂ, ಬಸ್ತಿ ಹಳ್ಳಿಯಲ್ಲಿ ಗಿರಿತಿಮ್ಮಪ್ಪನಿಗೂ, ಜಾಲಿಕಟ್ಟೆಯಲ್ಲಿ ಪರಸಣ್ಣನಿಗೂ ಬೆಂಬಲ ಕೊಟ್ಟವನು. ಒಂದು ಜಂತು, ಮತ್ತೊಂದು ಕೊಕ್ಕೆಹುಳ, ಇನ್ನೊಂದು ಲಾಡಿಹುಳ ಮತ್ತೊಂದು ನಾರುಹುಣ್ಣು. ನಮ್ಮವರು ನಮಗೇ ಬೆಂಬಲಿಸದಿದ್ದರೆ ಇನ್ನಾರು ನಮಗೆ ಗತಿ ಎಂಬುದು ಅವನು ಬೆಂಬಲಿಸಿದ

ಎಲ್ಲ ಅಭ್ಯರ್ಥಿಗಳ ವಿಪ್ರಲಾಪ. ಅಲ್ಲದೆ ಅವನು "ಕ್ಲೀನ್" ಕೈಗಳ ಬೆಂಬಲ. ಈ ನಾಲ್ವರೂ ಕ್ಲೀನೇ ? ಇಲ್ಲದಿರಬಹುದು. ಆದರೆ ಬೆಂಬಲ ಯಾಚಿಸಿದ್ದಾರೆ. ಅಲ್ಪಸಂಖ್ಯಾತರ ಅಬ್ಬರ, ಹಿಂದುಳಿದವರ ಹಿಂಸೆ, ಬಹು ಸಂಖ್ಯಾತರ ಛಿದ್ರೀಕರಣ. ಯಾರು ಎಂದೂ ಎಲ್ಲಿ ತಿಂದಿಲ್ಲ. ಇವರು ನಮ್ಮವರು ಎಂಬ ಪ್ರಜ್ಞೆ ಅಲಂಕಾರನನ್ನು ಬೇಟೆ ನಾಯಿಯಂತೆ ಕಾಡುತ್ತದೆ.

ಅಲಂಕಾರ ಊರಿನಲ್ಲಿರಲಿಲ್ಲ. ಅವನು ಓಟು ಮಾಡಿದವನಲ್ಲ, ಏಕೆಂದರೆ ಅವನು ಹೇಳುವಂತೆ ಏನು ಪುರುಷಾರ್ಥಕ್ಕೆ ಓಟು ಮಾಡಬೇಕು ? ಜಾಲಿಕಟ್ಟೆಯ ಅಭ್ಯರ್ಥಿ ಪರಸಣ್ಣ ತನ್ನ ಉಡಿಯಲ್ಲಿ ಹತ್ತು ಓಟು ಅಲಂಕಾರನ ಮನೆಯಿಂದ ಬಿದ್ದಂತೆ ಎಂದು ಭಾವಿಸಿದ್ದ. ಆದರೂ ಕೇಳುವಂತೆ ಕೇಳಲಿಲ್ಲ. ಶ್ರೀಮತಿ ಅಲಂಕಾರ್ ಕೇಳದಿರುವವರಿಗೆ ಓಟು ಕೊಡಬಾರದು ಎಂದು ನಿರ್ಧರಿಸಿದ್ದರು. ಅವರನ್ನೇನು ಕೇಳುವುದು ಎಂದು ಪರಸಣ್ಣ. ನಮ್ಮ ಮನೆಯಲ್ಲಿ ನಾವು ಉಪಚಾರ ಮಾಡಬೇಕಿಲ್ಲ. ದಸರಣ್ಣ ಜಂತಾ. ಅವನೂ ಅಲಂಕಾರನೂ ಚೆಡ್ಡಿ ದೋಸ್ತುಗಳು. ಆದರೆ ಅವನಲ್ಲಿ ರಾಷ್ಟ್ರೀಯತೆಯಿರಲಿಲ್ಲ. ಅಂದರೆ ಅವನು ಪರಜಾತೀಯ. ಅವನ ಶಿಸ್ತು, ಶುಭ್ರಚರಿತ್ರೆ ಲೋಕ ಪ್ರಸಿದ್ಧ. ಶ್ರೀಮತಿ ಅಲಂಕಾರ್ ಓಟನ್ನು ದಸರಣ್ಣನಿಗೆ ಕೊಟ್ಟಳು. ಜೂ. ಅಲಂಕಾರ್ ಪರಸಣ್ಣನಿಗೆ ಓಟು ಕೊಟ್ಟ. ಕಾರಣವಿಷ್ಟೇ— ಜಾತಿಯವಾದಿಗಳಾದ ತನ್ನ ತಂದೆ ಪರಸಣ್ಣಗಳ ವಿಜಯ ಅವನಿಗಿಷ್ಟವಿಲ್ಲ, ಆದರೆ ಅವನು ತನ್ನ ಜೀವಮಾನದಲ್ಲಿ ಓಟು ಕೊಟ್ಟ ಯಾರೂ ಗೆದ್ದಿರಲಿಲ್ಲ.

ಇನ್ನು ಉಳಿದ ಶ್ರೀ ಸಾಮಾನ್ಯ ಎರಿಗ. ಅವನು 'ಮಾಲಿ'ಗಾಗಿ ಅಲೆಯುತ್ತಾ 'ದೂರ ಬಹು ದೂರ, ಹೋಗುವ ಬಾರಾ ಬಾರಾ' ಎಂದು ಗೊಣಗುತ್ತಾ ಸೀಮೋಲ್ಲಂಘನ ಮಾಡಿದ್ದ.

# ನೀವು ಜೀವಿಸಲು ಯೋಗ್ಯರೇ?

—ಶಿವು

---

ಈಚೀಚೆಗೆ ಯಾವ ಪತ್ರಿಕೆಯಲ್ಲಿ ನೋಡಿದರೂ ಒಂದಲ್ಲ ಒಂದು ಪ್ರಶ್ನಾವಳಿ ಇದ್ದೇ ಇರುತ್ತದೆ. ನಿಮ್ಮ ಬುದ್ಧಿಯ ಮಟ್ಟದಿಂದ ಹಿಡಿದು. ನೀವು ಆದರ್ಶ ಪತಿಯೇ? ನಿಮ್ಮ ಸ್ನೇಹಪರತೆ ಎಷ್ಟು? ನೀವು ಉದ್ಯೋಗದಲ್ಲಿ ಯಶಸ್ವಿ ಯಾಗಿದ್ದೀರ? ಇತ್ಯಾದಿ, ಇತ್ಯಾದಿ, ನೂರೆಂಟು ವಿಷಯಗಳ ಬಗ್ಗೆ, ಪ್ರಶ್ನಾವಳಿಗೆ ನೀವು ಕೊಡುವ ಉತ್ತರಗಳ ಮೇಲೆ, ನಿಮ್ಮ ಭವಿಷ್ಯವನ್ನು ನಿರ್ಧರಿಸಿಬಿಡುತ್ತಾರೆ. "ಅಪರಂಜಿ" ಇದಕ್ಕೆ ಹೊರತಾಗಬಾರದೆಂಬ ಸದ್ಭಾವನೆಯಿಂದ ಮೇಲೆ ತಿಳಿಸಿದ "ನೀವು ಜೀವಿಸಲು ಯೋಗ್ಯರೇ? ಎಂಬುದರ ಬಗ್ಗೆ ಕೆಳಗಿನ ಪ್ರಶ್ನಾವಳಿಯನ್ನು ನೀಡಿದ್ದೇವೆ. ಗಣಿತದಲ್ಲಿ ನಮಗಿರುವ ಶಕ್ತಿಯನ್ನು ಅರಿತು, ಈ ಪ್ರಶ್ನಾವಳಿಯ ಅಂಕೆಗಳ ಲೆಕ್ಕವನ್ನು ನಿಮಗೇ ಬಿಟ್ಟಿದೇವೆ.

ಪ್ರಶ್ನೆ.— ನೀವು ಮಲ್ಲೇಶ್ವರಂ 18ನೇ ಕ್ರಾಸಿನಿಂದ. ಗಾಂಧಿ ಬಜಾರ್ ಬಸ್ಸನ್ನು ಹತ್ತಿ, ಶೇಷಾದ್ರಿಪುರಂನಲ್ಲಿ ಇಳಿಯುವರಿದ್ದೀರ—ಇಲ್ಲಿನವರೆಗೂ ಕಂಡಕ್ಟರ್ ನಿಮ್ಮ ಹತ್ತಿರ ಬಂದಿಲ್ಲ. ಇಳಿಯುವ ಮುನ್ನ ನೀವು

(ಅ) ಏನೂ ತಿಳಿಯದಂತೆ ನಿಮ್ಮ ಸ್ಟಾಪಿನಲ್ಲಿ ಇಳಿದು ಬಿಡುತ್ತೀರ

(ಆ) ಕಂಡಕ್ಟರನ್ನು ಕರೆದು, ಪೂರ್ತಿ ಛಾರ್ಜು ಕೊಟ್ಟು ಇಳಿಯುತ್ತೀರ

(ಇ) ಕೊನೆಯ ಸ್ಟೇಜ್ ಪಾಯಿಂಟಿನಿಂದ ಆಗಿರುವ ಛಾರ್ಜನ್ನು ಕೊಟ್ಟು ನಡೆದು ಬಿಡುತ್ತೀರ

**ಸರಿಯಾದ ಉತ್ತರ**.—(ಇ). ನೀವು (ಅ) ಉತ್ತರಿಸಿದರೆ ಅದು ನಿಜವಾಗಿ ಮೋಸಮಾಡಿದಂತೆ.

(ಆ) ಉತ್ತರಿಸಿದ್ದರೆ ನಿಮ್ಮ ತ್ರೇತಾಯುಗದಲ್ಲಿರಬೇಕಾಗಿತ್ತು, ಕಲಿಯುಗ ದಲ್ಲಿರುಲು ಲಾಯಖ್ಖಿಲ್ಲ. ಇಂದಿನ ಜೀವನದ ಮುಖ್ಯಮಂತ್ರ ಕಾಂಪ್ರೊಮೈಸ್, ನಿಮ್ಮ ಆತ್ಮ ಸಾಕ್ಷಿಗೂ ಹೆಚ್ಚು ಭಾರವಾಗದಂತೆ ಪರ್ಸಿಗೂ ಹೆಚ್ಚು ಆಘಾತವಾಗ ದಂತೆ ನಡೆಯುವುದೇ ಯಶಸ್ವೀ ಜೀವನದ ಗುಟ್ಟು.

ಪ್ರಶ್ನೆ :—"ಸ್ವಲ್ಪ ಪೆನ್‌ಕೊಡುತೀರ ಸಾರ್ ?" ಅಂತ ಪಕ್ಕದಲ್ಲಿನ ಆ ಸಾಮಿ ನಿಮ್ಮನ್ನ ಪೋಸ್ಟ್ ಆಫೀಸಿನಲ್ಲಿ ಕೇಳುತ್ತಾನೆ. ನಿಮ್ಮದು ಹೊಸಾ ಹೊಸ ಪಾರ್ಕರ್ ಪೆನ್. ನಿಮ್ಮ ಮುದ್ದಿನ ಮಗಳು ಅಮೇರಿಕಾದಿಂದ ತಂದುಕೊಟ್ಟದ್ದು ನೀವು.

(ಅ) "ಆಗಲಿ, ಅದಕ್ಕೇನು" ಅಂತ ಪೆನ್ ಕೊಟ್ಟು. ಆತ ಪೆನ್ನನು ಒದರಿ, ನಿಬ್ಬನ್ನು ಗೋಡೆಗೆ ತಾಕಿಸಿ ಹಲ್ಲು ಕಿರಿಯುವುದನ್ನು ಅಸಹಾಯಕರಾಗಿ ನೋಡುತ್ತೀರ.

(ಆ) "ಕೊಡೋದಿಲ್ಲಾರೀ" ಅಂತ ಒರಟಾಗಿ ಹೇಳಿ ಹೊರಟು ಬಿಡುತ್ತೀರ.

(ಇ) "ಅಯ್ಯೋ ಇಂಕೇ ಇಲ್ಲವಲ್ಲಾರೀ, ಏನ್ಮಾಡಲೀ" ಅಂತ ಅತ್ಯಂತ ಸಹಾನು ಭೂತಿಯಿಂದ ಹೇಳುತ್ತೀರ.

ಸರಿಯಾದ ಉತ್ತರ :—(ಇ). ಬಿಳೀ ಸುಳ್ಳು (white lie) ಹೇಳುವ ಕಲೆ ಕರಗತವಾಗಿರಬೇಕು ಈಗಿನ ಕಾಲದಲ್ಲಿ.

ಪ್ರಶ್ನೆ .—ನಿಮ್ಮ ಮನೆ ಬಾಗಿಲಿಗೆ ಚೂಟಿ ಯುವಕನೊಬ್ಬ ವ್ಯಾಕ್ಯೂಮ್ ಕ್ಲೀನರ್ ಮಾರಲು ಬರುತ್ತಾನೆ. "ಒಂದು ಐದು ನಿಮಿಷ ಅವಕಾಶ ಕೊಡಿಸಾರ್, ನಮ್ಮ ಉಪಕರಣ ಎಷ್ಟು ಬೇಗ ಕಾರ್ಪೆಟ್ ಸ್ವಚ್ಛ ಮಾಡುತ್ತೆ ಅಂತ ಪ್ರಮಾಣ ಮಾಡಿ ತೋರಿಸ್ತೀನಿ" ಅಂತ ಬಹಳ ಮುಗ್ಧತೆಯಿಂದ ಕೇಳುತ್ತಾನೆ. ನೀವು ಆಗ ತಾನೇ ಕ್ಲಬ್ಬಿಗೆ ಹೊರಟಿದ್ದೀರ. ಆಗಲೇ ಲೇಟ್ ಆಗಿದೆ. ನೀವು

(ಅ) "ಬೇಡಾಪ್ಪಾ ನಮ್ಮ ಮನೇಲಿ ಕೆಲಸದೋಳೇ ಎಲ್ಲಾ ಗುಡಿಸೋದು" ಅಂತ ಹೇಳಿ ಮುಂದಿನ ಅರ್ಧ ಘಂಟೆ ಅವನೊಡನೆ ಚರ್ಚೆಯಲ್ಲಿ ತೊಡಗುತ್ತೀರ.

(ಆ) "ಆಗಲಿ ಐದೇನಿಮಿಷ" ಅಂತ ಒಪ್ಪಿಕೊಂಡು. ಅವನು ಹದಿನೈದು ನಿಮಿಷ ತ್ರೀಪಿನ್ ಪ್ಲಗ್‌ನ, ಟೂಪಿನ್ ಸಾಕೆಟ್‌ನಲ್ಲಿ ಹಾಕೋದನ್ನೇ ಹತಾಶ ಭಾವನೆಯಿಂದ ನೋಡುತ್ತಿರುತ್ತೀರ

(ಇ) "ನಿನ್ನ ತರಹಾನೇ ಇನ್ನೊಬ್ಬ ಚೂಟಿ ಹುಡುಗ ಹೋದ ವಾರಾನೇ ಇಂಥದೇ ಒಂದು ಕ್ಲೀನರ್‌ನ ಮಾರಿಬಿಟ್ಟು ಹೋದನಲ್ಲಾಪ್ಪಾ" ಅಂತ ಸಬೂಬು ಹೇಳಿ ಕ್ಲಬ್ಬಿನಕಡೆ ಹೊರಡುತ್ತೀರ.

**ಸರಿಯಾದ ಉತ್ತರ** :—(ಇ] ಈಗಿನ ಕಾಲದ ಹುಡುಗರು ತುಂಬಾ ಸೆನ್ಸಿಟಿವ್ ಬೇಡ ಅಂತ ನೇರವಾಗಿ ಹೇಳಿ, ಹಾರಾಟದಲ್ಲಿ ಅವರಿಗಿರೋ ಉತ್ಸಾಹಾನೇ ಕೆಡಸಬಾರದು. ಹಾಗೆಂದು ಹೊರಗಿನ ಪರಿಸರ ನಿಮ್ಮ ಮುಖ್ಯ ಕಾರ್ಯಕ್ರಮ[?] ಗಳಿಗೆ ಅಡ್ಡಿ ಯುಂಟುಮಾಡುವುದಾದರೆ, ಅದಕ್ಕೆ, ನೀವೇ ಹೊಣೆ ಅಲ್ಲವೇ?

**ಪ್ರಶ್ನೆ** :—ನಿಮ್ಮ ಫೋನ್, ಆದಿನ ಸಾಯಂಕಾಲ ಮೂವತ್ತೇಳನೇ ಬಾರಿ ರಿಂಗ್ ಆಗುತ್ತೆ. ಮೂವತ್ತಾರುಸಲ ನೀವು "ರಾಂಗ್ ನಂಬರ್" ಎಂದು ಹೇಳಿ ಬೇಸತ್ತಿದ್ದೀರ. ನೀವು

(ಅ) ರಿಸೀವರ್ ತೆಗೆದು ಕೆಳಗಿಟ್ಟು ಬಿಡುತ್ತೀರ,

(ಆ) "ಯಾರ್ರೀ ಅದು, ದುಡ್ಡು ಜಾಸ್ತಿಯಾಗಿದ್ಯೇನ್ರಿ, ಒಂದು ಸಲ ಹೇಳಿದ್ರೆ ಗೊತ್ತಾಗುಲ್ವೇ ?" ಅಂತೆಲ್ಲಾ ಸಿಕ್ಕಾಪಟ್ಟೆ ರೇಗಿಬಿಡುತ್ತೀರ.

(ಇ) ಯಾರು ಅಂತ ವಿಚಾರಿಸಿ, ಅದೇ ಆಸಾಮಿ ಅಂತ ಖಾತ್ರಿಯಾದ ಮೇಲೆ, ಏನೂ ಉತ್ತರಿಸದೇ ರೀಸೀವರ್ ಪಕ್ಕದಲ್ಲಿಟ್ಟು, ಆತ ಪುನಃ ಇನ್ನಾರಿಗೂ ಫೋನ್‌ಮಾಡದಂತೆ ಮಾಡುತ್ತೀರ.

**ಸರಿಯಾದ ಉತ್ತರ** .—ನೀವು ಊಹಿಸಿದಂತೆ (ಇ). ರೇಗುವುದರಿಂದ ಬ್ಲಡ್ ಪ್ರೆಷರ್ ಹೆಚ್ಚಾಗಿ ಕಾಂಪೋಸ್ ತೆಗೆದುಕೊಳ್ಳಲು ಔಷಧಿ ಬೀರುಕಡೆ ನುಗ್ಗಿ, ಕಾಂಪೋಸ್ ಇಲ್ಲದಿರುವುದನ್ನು ಕಂಡು, ಇನ್ನೂ ಕಳವಳ ಉಂಟಾಗಿ...........

ರಿಸೀವರು ಸುಮ್ಮನೇ ತೆಗೆದಿಟ್ಟರೆ, ನಿಮ್ಮ ಗ್ರಹಚಾರಕ್ಕೆ. ಅದೇ ನಿಮಗೆ ಅತಿ ಮುಖ್ಯವಾದ ಕರೆಯಾಗಿರಬಹುದು. ಮರ್ಫಿಯಲಾ ಕೇಳಿಲ್ಲವೇ !

**ಪ್ರಶ್ನೆ** .— ರಾತ್ರಿ ಹತ್ತು ಘಂಟೆಗೆ ನೀವು ಬೇರೇ ಊರಿನಿಂದ, ಲಕ್ಷುರಿ ಬಸ್ಸಿನಲ್ಲಿ ಬಂದು ಮೆಜೆಸ್ಟಿಕ್‌ನಲ್ಲಿ ಇಳಿದಿದ್ದೀರ. ನಿಮ್ಮ ಮನೆ ಮಲ್ಲೇಶ್ವರದಲ್ಲಿ. ಯಾವ ಆಟೋ ಚಾಲಕನನ್ನು ಕೇಳಿದರೂ "ಮಲ್ಲೇಶ್ವರ" ಅಂದತಕ್ಷಣ "ಇಲ್ಲಾ ಸಾರ್" ಅಂತ ಬೊರಟುಬಿಡುತ್ತಿದ್ದಾನೆ, ನೀವು.

(ಅ) ನಿಮ್ಮ ಕರ್ಮವನ್ನು ಹಳಿಯುತ್ತಾ ಬಸ್ಸಿಗೆ ಕ್ಯೂ ನಿಲ್ಲುತ್ತೀರ.

(ಆ) "ನೀ ಎಲ್ಲಿಗೆ ಹೋಗ್ತಿದ್ದೀಯಾಪ್ಪಾ ?" ಅಂತ ನಯವಾಗಿ ಕೇಳಿ ನಿಮ್ಮ ದಿಕ್ಕಿನಲ್ಲಿ ಹೋಗುವನಿದ್ದರೆ ಆಟೋ ಹತ್ತಿ, ಮಲ್ಲೇಶ್ವರದ ಹತ್ತಿರ ಇಳಿಯುವ ಬಗ್ಗೆ ಆಮೇಲೆ ಯೋಚಿಸುತ್ತಿರ,

(ಇ) "ಆಟೋ ಸಾರ್ವಜನಿಕ ವಾಹನ. ಪೋಲೀಸ್‌ಗೆ ತಿಳಿಸುತ್ತೇನೆ. ನಂಬರ್ ಕೊಡು, ಹೆಸರೇನು" ಅಂತ ದಬಾಯಿಸಿ ಹದಿನೆಂಟು ನಂಬರ್ ಹಾಗೂ ಹೆಸರುಗಳನ್ನು ಸಂಗ್ರಹಿಸುತ್ತೀರ

ಸರಿಯಾದ ಉತ್ತರ :—(ಅ) ಅನೇಕ ಸಂದರ್ಭಗಳಲ್ಲಿ ನಮ್ಮ ಗುರಿ ಸಾಧಿಸ ಬೇಕಾದ ಮಾರ್ಗ ನಮಗೇ ಪೂರ್ಣವಾಗಿ ಗೋಚರವಾಗಿರುವುದಿಲ್ಲ. ಅಂತಹ ಪ್ರಸಂಗಗಳಲ್ಲಿ ರಾಕೆಟ್‌ಗಳಿಗೆ ಮಾಡುವ ಹಾಗೆ ಮಿಡ್‌ಕೋರ್ಸ್ ಕರೆಕ್ಷನ್ (ಮಧ್ಯದಾರಿ ದಿಕ್ ನಿಯಂತ್ರಣ !) ಮಾಡಲು ಸಿದ್ಧರಾಗಿರುವುದೇ ಜಾಣರ ಲಕ್ಷಣ.

ಪ್ರಶ್ನೆ :—ನೀವು ಒಬ್ಬ ಸಣ್ಣ ಉದ್ಯಮಿ; ಒಂದು ಸಣ್ಣ ಷಾಪ್ಪಿನಲ್ಲಿ, ಎರಡು ಲೇತು ನಾಲ್ಕು ಕೆಲಸಗಾರರು, ಸಾವಿರ ತಾಪತ್ರಯಗಳ ನಡುವೆ ಹೆಣಗಾಡುತ್ತಿರು ವಾಗ, ನಾಲ್ಕು ಧಡೂತಿ ಆಸಾಮಿಗಳು ನಿಮ್ಮ ಷಾಪ್ಪಿಗೆ ನುಗ್ಗುತ್ತಾರೆ. "ಕನ್ನಡ ರಾಜ್ಯೋತ್ಸವ ನಡೆಸುತ್ತೇವೆ ಸಾರ್, ತಾವು ಒಂದು ನೂರು ರೂಪಾಯಿ ಕೊಡ ಬೇಕು" ಅಂತ ಆಗ್ರಹ ಪಡಿಸುತ್ತಾರೆ. ನೀವು.

(ಅ) "ನನಗೇ ಹೊಟ್ಟೆಗಿಲ್ಲ ನಿಮಗೆಲ್ಲಿಂದ ತರಲೀ" ಅಂತ ಗೋಗರೆಯು ತ್ತೀರ.

(ಆ) ಆದದ್ದಾಗಲೀ ಅಂತ "ಇಲ್ಲ ಹೋಗಿ, ಅಂತ ದಬಾಯಿಸಿ ಬಿಡುತ್ತೀರ

(ಇ) "ಪ್ರೊಪ್ರೈಟರ್ ಇಲ್ಲಾರೀ, ನಾನು ಮ್ಯಾನೇಜರು. ಅವರು ಬಂದ ತಕ್ಷಣ ತಿಳಿಸುತ್ತೇನೆ. ಅಡ್ರೆಸ್ ಬಿಟ್ಟು ಹೋಗಿ" ಅಂತ ಬೆಣ್ಣೇಲಿ ಕೂದಲು ತೆಗೆದ ಹಾಗೆ ನಯವಾಗಿ ಹೇಳುತ್ತೀರ.

ಸರಿಯಾದ ಉತ್ತರ :—(ಇ) ಗೋಗರೆಯುವುದು ಆತ್ಮ ಗೌರವಕ್ಕೆ ಕುಂದು; ಬೇಡದ ಕಡೆ ದಿಟ್ಟ ನಿಲುವು ವ್ಯರ್ಥ.

ನಿಮ್ಮ ಸ್ಕೋರ್ ಏನೇ ಆಗಿರಲಿ, 'ಅಪರಂಜಿ' ಓದುಗರೆಲ್ಲರೂ ಜೀವನದ ಲಲಿತ ಕಲೆಯಲ್ಲಿ ಪರಿಣತರೇ ಅಲ್ಲವೇ !

# ನಂ ಕ್ಲಬ್ಬಿನಲ್ಲಿ

—ಆನಂದ್

ಸಂಜೆ ಕ್ಲಬ್ಬಿಗೆ ಹೋದೆ. ಒಂದು ಮೂಲೇಲಿ ನಾಣಿ ಕೂತಿದ್ದ, ಠೇವಣಿ ಕೂಡ ಕಳೆದುಕೊಂಡ ಉಮೇದುವಾರನ ಮುಖ! "ಏನೋ ನಾಣಿ, ಯಾಕೆ ಹೀಗಿದ್ದೀಯೊ?" ಅಂದೆ. "ಕೂರು, ಹೇಳ್ತೀನಿ. ಅಂದ. "ಮೊನ್ನೆ ನನ್ನ ಬಿಸಿನೆಸ್ ಗೆಳೆಯನ ಮಗನ ಮದುವೆ ರಿಸೆಪ್ಷನ್—ಪಂಚತಾರಾ ಹೋಟಲಲ್ಲಿ. ಏಳು ಗಂಟೆಗೆ ಅಂತಿತ್ತು; ಮರೆತು ಆರೂವರೇಗೇ ಹೋದ್ಲೆ. ಅರ್ಧ ಗಂಟೆ ತಳ್ಳೋದು ಹೇಗೆ ಅಂತ ಬಾರಲ್ಲಿ ಕೂತೆ; ಎರಡು ಸ್ಕಾಚ್ ಹಾಕೋದರಲ್ಲಿ ಮನಸ್ಸು ಹಗುರವಾಯ್ತು. ರಿಸೆಪ್ಷನ್ ಶುರುವಾಗಿತ್ತು. ಒಳಗೆ ಹೋಗಿ ಗೆಳೆಯನ್ನ ಮಾತಾಡಿಸಿದೆ. ಮದುಮಗ ಹಲ್ಕಿರೀತಾ ಕೈ ಮುಂದೆ ಮಾಡಿದ! ನಾನು " many happy returns of the day! " ಎಂದು ಕೈ ಕುಲುಕಿದೆ. ಎಲ್ಲರೂ ಯಾಕೋ ದುರುಗುಟ್ಟಿ ನೋಡಿದರು. ಹೋಟಲ್ ಹೊರಗೆ ತಂಗಾಳಿ ಮುಖಕ್ಕೆ ತಾಕಿದಾಗ ಅರ್ಥವಾಯ್ತು! ಅಂದ. ನಾಣಿ. "ಬೇರರ್, ನಾಣೀಗೆ ಇನ್ನೊಂದು ಜಿನ್ ಕೊಡು ಬೇಗ" ಅಂದೆ.

o o o o o

ಮೊನ್ನೆ ಕ್ಲಬ್ಬಿನಲ್ಲಿ ಜೋಸೆಫ್ ಸಿಕ್ಕಿದ. ಬಹಳ ಹೆಸರಾದ ಕಾರ್ ರಿಪೇರಿ ಗ್ಯಾರೇಜ್ ನಡೆಸ್ತಾನೆ ಅವನು. "ಏನಯ್ಯ ಬಹು ದಿನದಿಂದ ನಾಪತ್ತೆ?" ಎಂದು ಕೇಳಿದೆ. "ಬಹಳ ಕೆಲಸ ಮರಿ, ಸೀಜನ್ ಜೋರು!" ಅಂದ. "ಅದೇನೋ ಅದು ಕಾರ್ ರಿಪೇರೀಗೂ ಸೀಜನ್ನೇ?" ಅಂದೆ. ಕನಿಕರ ದೃಷ್ಟಿ ಬೀರುತ್ತ ಹೇಳಿದ :—

"ಚುನಾವಣೇಗೆ ಹೋಗಿದ್ದ ಕಾರುಗಳೆಲ್ಲ ವಾಪಸ್ ಬರುತ್ವೆ ಕಣೋ ಈಗ!" ನನಗೂ ಜ್ಞಾನೋದಯವಾಯಿತು.

